ಪ್ರಚಾರ ಪುಸ್ತಕ ಮಾಲೆ

103

ಉಪನಿಷತ್ ಪರಿಚಯ

ಸೋಮನಾಥಾನಂದ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೧೦೩

ಉಪನಿಷತ್ ಪರಿಚಯ

ಸೋಮನಾಥಾನಂದ

೧೯೮೮

ಮೊದಲನೆಯ ಮುದ್ರಣ : ೧೯೬೧
ಎರಡನೆಯ ಮುದ್ರಣ : ೧೯೬೮
ಮೂರನೆಯ ಮುದ್ರಣ : ೧೯೭೩
ನಾಲ್ಕನೆಯ ಮುದ್ರಣ : ೧೯೮೮

೧೦,೦೦೦ ಪ್ರತಿಗಳು

ಬೆಲೆ : ರೂ. ೧-೦೦

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೋಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ಅವರ ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ನೂರ ಎರಡು ಪುಸ್ತಕ ಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಸ್ವಾಮಿ ಸೋಮನಾಥಾನಂದರ 'ಉಪನಿಷತ್ ಪರಿಚಯ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ನಾರಾಯಣರಾವ್ ಅಪ್ಪಾರಾವ್ ನಿಕ್ಕಂ
ವೈಸ್-ಛಾನ್ಸಲರ್

ಪರಿವಿಡಿ

ಉಪನಿಷತ್ ಪರಿಚಯ

೧. ಪೀಠಿಕೆ

ವಿಶ್ವದ ಅತ್ಯಂತ ಪುರಾತನವಾದ ಶಾಸ್ತ್ರವರ್ಗಕ್ಕೆ ಸೇರಿದ ನಾಲ್ಕು ವೇದಗಳು ಭಾರತೀಯರ ತತ್ತ್ವಶಾಸ್ತ್ರದಲ್ಲಿ ವಿರಾಟ್ ಹಿಮಾಲಯ ಪಂಕ್ತಿಯನ್ನು ಹೋಲುತ್ತವೆ. ಕೆಳಗಡೆ ಗ್ರಾಮಗಳು, ದಟ್ಟವಾದ ಕಾಡುಗಳು, ಮೇಲೆ ಮೇಲೆ ಹೋದಂತೆ ತುಷಾರಹಾರವನ್ನು ಧರಿಸಿ ನಿಂತಿರುವ ಉಪನಿಷತ್ತಿನ ಶಿಖರಗಳು ಗಗನವನ್ನು ಚುಂಬಿಸುತ್ತವೆ. ಮಾನವ ಮರ್ತ್ಯಲೋಕದಿಂದ ಅಮೃತತ್ವಕ್ಕೆ ಹೋಗಲು ನಿರ್ಮಿಸಿದ ಏಣಿಯಂತಿವೆ ಉಪನಿಷತ್ತುಗಳು. ಕಾಲ, ದೇಶ, ಕಾರ್ಯ ಕಾರಣ ಪ್ರಪಂಚವನ್ನುಲ್ಲಂಘಿಸಿಹೋದ ಮಹಾಮಹಿಮರ ಭಾವನೆ ಘನೀಭೂತವಾಗಿ ಬಿದ್ದಿದೆ ಇಲ್ಲಿ. ವಿಚಾರ ಎಲ್ಲಿಯವರೆಗೆ ಒಯ್ಯುವುದೊ ಅಲ್ಲಿಯವರೆಗೆ ಹೋಗಿ, ಅನಂತರ ಅದನ್ನು ಮೀರಿ ಹೋದ ಮಹಾಋಷಿಗಳ ಪದಚಿಹ್ನೆಗಳನ್ನು ಉಪನಿಷತ್ತಿನಲ್ಲಿ ನೋಡುವೆವು. ಇಲ್ಲಿ ಒಂದು ತತ್ತ್ವವಲ್ಲ ಇರುವುದು, ತತ್ತ್ವಗಳ ಸಮುದಾಯ. ಒಂದು ಸಿದ್ಧಾಂತವಲ್ಲ, ಹಲವು ಸಿದ್ಧಾಂತಗಳನ್ನು ಪೋಷಿಸಬಲ್ಲ ಆಗಾರ ಉಪನಿಷತ್ತು. ಇಲ್ಲಿ ಬರುವುದು ಯಾವುದೋ ಒಂದು ವ್ಯಕ್ತಿಯ, ಒಂದು ಕಾಲದ ಭಾವನಾ ತರಂಗವಲ್ಲ. ಹಲವು ವ್ಯಕ್ತಿಗಳು ಸುಮಾರು ಹತ್ತು ಹದಿನೈದು ಶತಮಾನಗಳವರೆಗೆ ಸತ್ಯಾನ್ವೇಷಣೆಯಲ್ಲಿ ನಿರತರಾಗಿ, ಭಿನ್ನ ಭಿನ್ನ ದೃಷ್ಟಿಯಿಂದ ಗೋಚರಿಸಿದ ಏಕಸತ್ಯದ ಹಲವು ಚಿತ್ರಗಳನ್ನು ನಾವಿಲ್ಲಿ ನೋಡುವೆವು. ಉಪನಿಷತ್ತಿನಲ್ಲಿ ಬರುವ ವ್ಯಕ್ತಿಗಳು ಗೌರೀಶಂಕರ ಶಿಖರದಂತೆ ಮೇರುಪ್ರಾಯರು.

ಅನಂದ ಬಂದ ಹಾಗೆ ಜಗದ ಅನ್ವೇಷಣೆಗೆ ಹೊರಟು ತ್ತಿರುವ ಸಾಧನ ಮುಂದಾಳು. ಈ ಪ್ರಾಚೀನತಮ ಶಾಸ್ತ್ರದ ಒಂದು ಪಿಹಂಗಮ ಪರಿಚಯವನ್ನು ನೀಡಲು ಮಾಡಿದ ಪ್ರಯತ್ನ ಈ ಲೇಖನ.

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬ ನಾಲ್ಕು ವೇದಗಳನ್ನು ಮೂರು ಭಾಗ ಮಾಡಬಹುದು. ಅವೇ ಮಂತ್ರ ಬ್ರಾಹ್ಮಣ ಉಪನಿಷತ್ತು. ಮಂತ್ರ ಭಾಗದಲ್ಲಿ ಇಂದ್ರ ಅಗ್ನಿ ವರುಣ ಮರುತ್ ಮುಂತಾದ ದೇವತೆಗಳನ್ನು ಹೊಗಳುವರು. ಪ್ರಕೃತಿಯ ಶಕ್ತಿ ಮತ್ತು ಸೌಂದರ್ಯಗಳ ಹಿಂದೆ ಒಂದು ದೇವತ್ವವನ್ನು ನೋಡಿದಾಗ, ಅದರ ಅನುಭವದಿಂದ ಆಕರ್ಷಿತರಾದಾಗ ಇವನ್ನು ಬರೆದರು. ಆರ್ಯರನ್ನು ಮೊದಲು ಅತೀಂದ್ರಿಯದ ಅನುಭವದ ಕಡೆಗೆ ಸೆಳೆದದ್ದು ಉಷಸ್, ಸೂರ್ಯ, ಚಂದ್ರ, ವಾಯು, ನೀರು, ನಕ್ಷತ್ರ, ಮಿಂಚು, ಮಳೆ ಮುಂತಾದವು. ಇವುಗಳನ್ನು ಕೇವಲ ಜಡಶಕ್ತಿಯ ಆವಿರ್ಭಾವ ವೆಂದು ನೋಡದೆ, ಇದೊಂದು ಅತೀಂದ್ರಿಯ ಶಕ್ತಿಯ ಸ್ಥೂಲ ಆವಿರ್ಭಾವವೆಂದು ಪರಿಗಣಿಸಿದರು. ಇವುಗಳನ್ನು ಯಾಗ ಯಜ್ಞಾದಿಗಳನ್ನು ಮಾಡುವ ಸಮಯದಲ್ಲಿ ಹೇಳುತ್ತಿದ್ದರು.

ಎರಡನೆಯದೆ ಬ್ರಾಹ್ಮಣ. ಯಾಗ ಯಜ್ಞಾದಿಗಳನು ಮಾಡುವ ವಿಧಾನ, ಅವರಲ್ಲಿ ಯಾವ ಯಾವ ವಸ್ತುಗಳನ್ನು ಉಪಯೋಗಿಸಬೇಕು, ಎಷ್ಟು ಜನ ಪುರೋಹಿತರು ಇರಬೇಕು ಯಜ್ಞ ಸಮಯದಲ್ಲಿ ಅವರ ಕೆಲಸಗಳು, ಅವರಿಗೆ ಕೊಡುವ ಸಂಭಾವನೆ, ಇತ್ಯಾದಿಗಳನ್ನು ಅದು ಒಳಗೊಂಡಿರುವುದು. ವಿಗ್ರಹಾರಾಧನೆ, ದೇವಸ್ಥಾನ ಮುಂತಾದವು ಆಗ ಇರಲಿಲ್ಲ. ಇವುಗಳೆಲ್ಲ ಅನಂತರ ಬಂದವು. ಮಾನವ ತನ್ನ ಇಷ್ಟ ಮತ್ತು

ಪರಲೋಕದ ಅಭೀಪ್ಸೆಯನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಯಾಗ ಯಜ್ಞಾದಿಗಳನ್ನು ಮಾಡುತ್ತಿದ್ದನು.

ಮೂರನೆಯದು ಉಪನಿಷತ್ ಅಥವಾ ವೇದಾಂತ. ಹಲವು ಉಪನಿಷತ್ತುಗಳು ಇದ್ದರೂ ಮುಖ್ಯವಾಗಿರುವುವು ಹತ್ತು. ಅದೇ ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಪ್ರಶ್ನ, ತೈತ್ತರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ. ಇದು ಕೇವಲ ತತ್ತ್ವಭಾಗವನ್ನೊಳಗೊಂಡಿರುವುದು. ಇದರ ಉದ್ದೇಶ ಚರಾಚರ ವಸ್ತುವಿನ ಹಿಂದೆ ಇರುವ ಮೂಲ ಚೈತನ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದಾಗಿತ್ತು. ಕಾವ್ಯ ಎಷ್ಟೇ ಸುಂದರವಾಗಿರಲಿ ನಿರ್ದಾಕ್ಷಿಣ್ಯವಾಗಿ ವಿಚಾರಕ್ಕೆ ಬಲಿಕೊಟ್ಟರು. ಬಾಹ್ಯ ಆಚಾರಗಳು ಯಾಗ ಯಜ್ಞಗಳು ಇವುಗಳನ್ನು ಮಾಡುವುದರಿಂದ ಇಹಪರ ಲೋಕಗಳಲ್ಲಿ ನಮಗೆ ಶ್ರೇಯಸ್ಸು ದೊರೆತರೂ ಪರಮಸತ್ಯಕ್ಕೆ ನಮ್ಮನ್ನು ಕರೆದುಕೊಂಡುಹೋಗುವುದೇ ಎಂಬ ದೃಷ್ಟಿಯಿಂದ ನೋಡತೊಡಗಿದರು. ನಮಗೆ ಉಪನಿಷತ್ತಿನಲ್ಲಿ ಬರುವುದು ತಾತ್ತ್ವಿಕ ವಿಷಯಗಳು. ಬ್ರಹ್ಮ-ಜೀವ, ಜಗತ್ತು, ಬ್ರಹ್ಮನಿಗೂ ಜೀವಕ್ಕೂ, ಬ್ರಹ್ಮನಿಗೂ ಜಗತ್ತಿಗೂ, ಜಗತ್ತಿಗೂ ಜೀವಕ್ಕೂ ಇರುವ ಸಂಬಂಧಗಳನ್ನು ವಿವರಿಸಿರುವರು. ಇವುಗಳಲ್ಲಿ ಮಂತ್ರವನ್ನು ಕವಿಯ ಕೆಲಸವೆನ್ನಬಹುದು, ಬ್ರಾಹ್ಮಣ ಪುರೋಹಿತನ ಕೆಲಸ, ಉಪನಿಷತ್ತು ತಾತ್ತ್ವಿಕನ ಕೆಲಸ. ಈ ಮೂರು ಅಂತಸ್ತಿನ ವಿಚಾರಸರಣಿಯನ್ನು ನಾವು ವೇದಗಳಲ್ಲಿ ನೋಡುವೆವು.

ಉಪನಿಷತ್ತು ಪ್ರಸ್ಥಾನತ್ರಯಗಳಲ್ಲಿ ಬಹು ಮುಖ್ಯವಾದ ಅಂಗವಾಗಿದೆ. ಹಿಂದೂಗಳ ತತ್ತ್ವಸಿದ್ಧಾಂತಕ್ಕೆಲ್ಲಾ ವಜ್ರತಳಹದಿಯಂತಿರುವುದು ಉಪನಿಷತ್ತು, ಬ್ರಹ್ಮಸೂತ್ರ ಮತ್ತು

ಭಗವದ್ಗೀತಾ. ಇವುಗಳಲ್ಲಿ ಬ್ರಹ್ಮಸೂತ್ರ ಮತ್ತು ಭಗವದ್ಗೀತೆ
ಗಳಿಗೆ ಆಧಾರವೇ ಉಪನಿಷತ್ತು ಎನ್ನಬಹುದು. ಬ್ರಹ್ಮಸೂತ್ರ
ದಲ್ಲಿ ಉಪನಿಷತ್ತಿನಲ್ಲಿ ಹೇಳಿದ ಹೊಸ ವಿಷಯವೇನೂ ಇಲ್ಲ.
ಉಪನಿಷತ್ತಿನ ನುಡಿಗಳನ್ನು ಬಿಡಿಸಿ ಅವರಿಂದ ಒಂದು ಹಾರ
ವನ್ನು ಮಾಡಿದಂತೆ ಇದೆ ಬ್ರಹ್ಮಸೂತ್ರ. ಬ್ರಹ್ಮಸೂತ್ರದಲ್ಲಿ
ಬರುವ ಸೂತ್ರಗಳೆಲ್ಲಾ ಉಪನಿಷತ್ತಿನ ಹೂದೋಟದಿಂದ
ಕೊಯ್ದು ತಂದವು. ಅದನ್ನು ಜೋಡಿಸುವುದರಲ್ಲಿ ಒಂದು
ವೈಶಿಷ್ಟ್ಯ ಇದೆಯೆ ಹೊರತು ಮೂಲ ವಿಷಯಗಳಲ್ಲಿ ಯಾವ
ಒಂದು ಹೊಸದೂ ಇಲ್ಲ. ಆದಕಾರಣ ಬ್ರಹ್ಮಸೂತ್ರವನ್ನು
ಉಪನಿಷತ್ತಿನ ಉಪಜೀವಿ ಎಂದು ಕರೆಯಬಹುದು.

ಭಗವದ್ಗೀತೆಯಲ್ಲಿ ಬರುವ ವಿಷಯಗಳನ್ನು ಶ್ರೀ ಕೃಷ್ಣ
ಉಪನಿಷತ್ತಿನಿಂದಲೇ ತೆಗೆದುಕೊಂಡು ಸುಲಭವಾದ ರೀತಿಯಲ್ಲಿ
ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಹೇಳಿರುವನು.
ಭಗವದ್ಗೀತೆಯ ಧ್ಯಾನಶ್ಲೋಕದಲ್ಲಿ, ಉಪನಿಷತ್ತೇ ಬ
ಗೋವನ್ನು ಕರೆದು, ಬಂದ ಹಾಲೇ ಭಗವದ್ಗೀತೆ ಎಂದೂ
ಅದನ್ನು ಕರೆದ ಗೊಲ್ಲನೇ ಶ್ರೀ ಕೃಷ್ಣ ಎಂದೂ ಹೇಳುವುದರಿಂದ
ಉಪನಿಷತ್ತೇ ಭಗವದ್ಗೀತೆಗೆ ಆಶ್ರಯ ಎಂದು ಹೇಳಬೇಕಾಗು
ವುದು. ಭಾರತೀಯ ತತ್ತ್ವಕ್ಕೆ ಪ್ರಸ್ಥಾನತ್ರಯಗಳು ತಳಹದಿ
ಎಂದು ಒಪ್ಪಿಕೊಂಡರೂ ಬ್ರಹ್ಮಸೂತ್ರ ಭಗವದ್ಗೀತೆ ಇವೆರಡೂ
ನಿಂತಿರುವುದು ಉಪನಿಷತ್ತಿನ ಆಧಾರಸ್ತಂಭದ ಮೇಲೆ. ಇಡೀ
ಭಾರತೀಯರ ತಾತ್ತ್ವಿಕ ಪ್ರಣಾಳಿಕೆಗಳಿಗೆಲ್ಲಾ ಉಪನಿಷತ್ತೇ
ಉಗಮ ಸ್ಥಾನ.

ಉಪನಿಷತ್ತನ್ನು ಓದುವಾಗ ಮೊದಲು ನಮ್ಮನ್ನು ಆಕರ್ಷಿಸುವ
ಒಂದು ಭಾವನೆಯೇ ಅದರಲ್ಲಿ ಬರುವ ಸತ್ಯನಿಷ್ಠೆ. ಸತ್ಯವನ್ನು

ಅರಿಯುವುದಕ್ಕಾಗಿ ಅವನು ಏನನ್ನಾದರೂ ಬಲಿಕೊಡಲು ಸಿದ್ಧರಾಗಿದ್ದರು. ಶಾಸ್ತ್ರವೇ ಅವರಿಗೆ ಪರಮ ಪ್ರಮಾಣವಲ್ಲ. ಅನಂತರ ಬಂದ ಆಚಾರ್ಯರು ತಮ್ಮ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವಾಗ ಒಂದು ಉಪನಿಷತ್ತಿನ ನುಡಿಯನ್ನು ನುಡಿಯಿತೆಂದರೆ ಅದಕ್ಕೆ ಬದಲು ಯಾರೂ ಮಾತಾಡುವಂತಿರಲಿಲ್ಲ. ನಮ್ಮ ವಿಚಾರವೆಲ್ಲ ಸ್ತಬ್ಧವಾಗುತ್ತಿತ್ತು ಆ ನುಡಿಯ ಎದುರಿಗೆ. ಬೇಕಾದರೆ ನಾವು ಆ ನುಡಿಯನ್ನು ತೆಗೆದುಕೊಂಡು ಅದನ್ನು ಹೇಗೋ ಹಿಗ್ಗಲಿಸಿ ನಮ್ಮ ಅರ್ಥ ಅದರಲ್ಲಿ ಬರುವಂತೆ ಮಾಡಿದರೂ ಅದನ್ನು ತ್ಯಜಿಸಿ ಹೋಗುವ ಎದೆಗಾರಿಕೆ ಯಾವ ಆಚಾರ್ಯರಿಗೂ ಇರಲಿಲ್ಲ. ಆದರೆ ನಾವು ಉಪನಿಷತ್ತನ್ನು ತೆಗೆದುಕೊಂಡರೆ ಅಲ್ಲಿ ಯಾವ ವ್ಯಕ್ತಿಯೂ ಅಂಥ ಅನುಕರಣೆಯನ್ನು ನೋಡುವುದಿಲ್ಲ. ಧೀರ ಯಾತ್ರಿಕರು ಉಪನಿಷತ್ತಿನ ಋಷಿಗಳು ಸತ್ಯದ ಪಥದಲ್ಲಿ, ಸತ್ಯ ಎಲ್ಲಿಗೆ ಒಯ್ದರೆ ಅಲ್ಲಿಗೆ ಹೋಗಲು ಸಿದ್ಧರಿದ್ದರು. ಏನು ಬಲಿ ಕೇಳಿದರೆ ಅದನ್ನು ಕೊಡಲು ಸಿದ್ಧರಿದ್ದರು. ಇಂತಹ ಒಂದು ವಾತಾವರಣದಲ್ಲಿ ನಾವು ಚಲಿಸುತ್ತಿರುವೆವು. ಉಪನಿಷತ್ತನ್ನು ಅಧ್ಯಯನ ಮಾಡುವಾಗ ಯಾವ ಉಪನಿಷತ್ತನ್ನು ಒಳಗೊಂಡಿದೆಯೋ ಆ ವೇದವನ್ನೇ ಗೌಣವಾಗಿ ಪರಿಗಣಿಸುವಂತಹ ಧೈರ್ಯ ಇವರಿಗಿತ್ತು. ಶಾಸ್ತ್ರ ಎಷ್ಟೇ ಪವಿತ್ರವಾಗಿರಲಿ, ಎಷ್ಟೇ ಗಹನ ವಿಷಯಗಳನ್ನು ಒಳಗೊಂಡಿರಲಿ, ಅದಿರುವುದು ನಾವು ಅದನ್ನು ಮೀರಿಹೋಗುವುದಕ್ಕಾಗಿ. ಅದೊಂದು ಕೈಮರದಂತೆ. ಇಂತಹ ಊರಿಗೆ ಹೋಗಲು ಇದು ದಾರಿ, ಇಷ್ಟು ಮೈಲಿಗಳು ಇವೆ ಎಂದು ಅದು ಹೇಳಬಹುದು. ಆದರೆ ನಾವು ಕೈಮರದ ಸಮೀಪದಲ್ಲೇ ಇದ್ದರೆ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ.

ಶಾಸ್ತ್ರದ ಮಿತಿಯನ್ನು ಋಷಿಗಳು ಎಲ್ಲರಿಗಿಂತ ಚೆನ್ನಾಗಿ ಅರಿತಿದ್ದರು. ಮುಂಡಕ ಉಪನಿಷತ್ತಿನಲ್ಲಿ ಮಹಾಗೃಹಸ್ಥನಾದ ಶೌನಕನು ಅಂಗೀರಸ್ಸನನ್ನು ವಿಧಿಪ್ರಕಾರ ಸಮೀಪಿಸಿ "ಹೇ ಭಗವನ್, ಯಾವುದನ್ನು ತಿಳಿದುಕೊಂಡರೆ ಇದೆಲ್ಲವನ್ನೂ ತಿಳಿದಂತೆ ಆಗುವುದು?" ಎಂದು ಪ್ರಶ್ನಿಸುತ್ತಾನೆ. ಅಂಗೀರಸ್ಸನು ಶೌನಕನಿಗೆ ಹೀಗೆ ಹೇಳುತ್ತಾನೆ: "ಎರಡು ವಿದ್ಯೆಗಳನ್ನು ತಿಳಿದುಕೊಳ್ಳಬೇಕು. ಹೀಗೆ ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಅವು ಪರಾವಿದ್ಯೆ ಮತ್ತು ಅಪರವಿದ್ಯೆ. ಅವುಗಳಲ್ಲಿ ಅಪರವಿದ್ಯೆ ಯಾವುದೆಂದರೆ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ. ಈಗ ಪರಾವಿದ್ಯೆ—ಯಾವುದರಿಂದ ಅಕ್ಷರವು ಹೊಂದಲ್ಪಡುವುದೋ ಅದು ಪರಾವಿದ್ಯೆ."

ವಿಶ್ವದ ತತ್ತ್ವದಲ್ಲಿ ಶ್ರೇಷ್ಠತಮ ಭಾವನೆಗಳನ್ನು ಯಾವ ಮಹಾಮಹಿಮರು ಪ್ರಥಮಬಾರಿ ಜಗತ್ತಿಗೆ ಕೊಟ್ಟರೊ ಅವರಲ್ಲಿ ಹೆಸರಿನ ಆಸೆ, ಕೀರ್ತಿಯ ಆಸೆ ಲವಲೇಶವೂ ಇಲ್ಲದಿರುವುದನ್ನು ನಾವು ನೋಡುತ್ತೇವೆ. ತಮ್ಮ ನಾಮಾವಶೇಷಮಾಡಿಕೊಂಡು ಕೇವಲ ತತ್ತ್ವವೊಂದು ಮಾನವಕೋಟಿಗೆ ಉಳಿದರೆ ಸಾಕೆಂದು ಆಕಾರವಿಲ್ಲದ ಧ್ವನಿಯಂತೆ ಅವರಿರುವರು. ಉಪನಿಷತ್ತಿನಲ್ಲಿ ಹಲವರ ಹೆಸರುಗಳು ಬರುತ್ತವೆ. ಅವುಗಳಲ್ಲಿ ಕೆಲವು ಪೌರಾಣಿಕ ಮತ್ತೆ ಕೆಲವು ಆ ಕಾಲದಲ್ಲಿ ರೂಢಿ ಇದ್ದವರದು. ಆದರೆ ಎಲ್ಲಿಯೂ ಉಪನಿಷತ್ತನ್ನು ರಚಿಸಿದ ಕರ್ತೃವಿನ ಹೆಸರು ನಮಗೆ ದೊರಕುವುದು ಅಪರೂಪ. ಅವರು ಬಯಸಿದ್ದು ಮಾನವನ ಕಲ್ಯಾಣವನ್ನು, ತಮ್ಮ ಹೆಸರಿನ ಅಮರತ್ವವನ್ನಲ್ಲ. ತಮ್ಮ ಅಹಂಕಾರವನ್ನು ಅವರು ಎಷ್ಟು ಅಳಿಸಿಕೊಂಡಿದ್ದರು, ಆ ಪರ

ಬ್ರಹ್ಮನಲ್ಲಿ ಐಕ್ಯರಾಗಿದ್ದರು ಎಂಬುವಕ್ಕೆ ಇದೇ ಸಾಕ್ಷಿ. ಮಾನವ ಯಾವುದೋ ಒಂದು ಕ್ಷುದ್ರಕಾವ್ಯವನ್ನು ಬರೆದರೂ ಅದರ ಮೇಲೆ ದಪ್ಪ ಅಕ್ಷರಗಳಲ್ಲಿ ತನ್ನ ಹೆಸರನ್ನು ಮುದ್ರಿಸುವನು. ಆ ಗ್ರಂಥದಲ್ಲಿ ಬರುವ ಭಾವನೆಗಳನ್ನು ಹಲವು ಕಡೆಗಳಿಂದ ಸಂಗ್ರಹಿಸಿದ್ದರೂ ಅವರಲ್ಲಿ ಬರುವ ಭಾವನೆಗಳು, ಅಭಿಪ್ರಾಯಗಳಿಗೆಲ್ಲ ತಾನೇ ಸ್ವಂತ ಜವಾಬ್ದಾರನೆಂದು ಹೆಮ್ಮೆ ಪಡೆದುಕೊಳ್ಳಲೆತ್ನಿಸುವನು. ಇಂತಹ ಅಲ್ಪ ಮಾನವರೊಂದಿಗೆ ಭೂಮ ವಿದ್ಯೆಯನ್ನೇ ಜಗತ್ತಿಗೆ ನೀಡಿದ್ದರೂ ತಮ್ಮನ್ನು ಮರೆಮಾಡಿಕೊಂಡಿರುವವರನ್ನು ಹೋಲಿಸುವುದೂ ಅಕ್ಷಮ್ಯವಾಗುವುದು.

ಉಪನಿಷತ್ತನ್ನು ಬರೆದ ಋಷಿಗಳನ್ನು ಮಂತ್ರದ್ರಷ್ಟರು ಎನ್ನುತ್ತಾರೆ. ಅಲ್ಲಿ ಬರುವ ಭಾವನೆಗಳನ್ನು ಅವರು ಹೊಸದಾಗಿ ಸೃಷ್ಟಿಸಿದವರಲ್ಲ. ಪರಮಾರ್ಥಸತ್ಯ ವಿಶ್ವದಲ್ಲಿ ಸದಾ ಅನುರಣಿತವಾಗುತ್ತಿದೆ. ಸಣ್ಣದರಲ್ಲಿ ದೊಡ್ಡದರಲ್ಲಿ, ಜಡದಲ್ಲಿ ಚೇತನದಲ್ಲಿ, ಪಾಪಿಯಲ್ಲಿ ಪುಣ್ಯವಂತನಲ್ಲಿ ಅದು ಸದಾಕಾಲದಲ್ಲಿಯೂ ಸ್ಪಂದಿಸುತ್ತಿರುತ್ತದೆ. ಯಾರು ಬಹಿರ್ಮುಖಿವಾಗಿರುವ ಮನಸ್ಸನ್ನು ನಿಗ್ರಹಿಸಿ ಅಂತರ್ಮುಖ ಮಾಡುವರೊ. ಅವರಿಗೆ ಅದು ವೇದ್ಯ. ಆ ಪರಮಾರ್ಥಸತ್ಯವನ್ನು ನೋಡಿದವರು, ಅನುಭವಿಸಿದವರು, ಉಪನಿಷತ್ತಿನ ಋಷಿಗಳು. ಆ ಅನುಭವಕ್ಕೆ ಒಂದು ಶಬ್ದದ ಆಕಾರವನ್ನು ತೊಡಿಸಿ ಉಪನಿಷತ್ತಿನಲ್ಲಿ ಇಟ್ಟಿರುವರು. ಅದು ಅವರಿಗೆ ಮಾತ್ರ ವಿಶೇಷವಾದ ಅನುಭವವೂ ಅಲ್ಲ. ಯಾವ ದೇಶದಲ್ಲೇ ಇರಲಿ, ಯಾವ ಕಾಲಕ್ಕೇ ಸೇರಿರಲಿ, ಯಾವ ಧರ್ಮಕ್ಕೇ ಸೇರಿರಲಿ ಸಾಧಕನು ಸಾಧನ ಚತುಷ್ಟಯವಾದ ಗರಡಿಯಲ್ಲಿ ಪಳಗಿ ಮುಂದುವರಿದರೆ

ಅವನಿಗೆ ಆ ಅನುಭವ ದೊರಕುವುದರಲ್ಲಿ ಸಂದೇಹವಿಲ್ಲ. ಉಪನಿಷತ್ತಿನಲ್ಲಿ ಬರುವ ಸತ್ಯ ಅನಾದಿ. ಅದನ್ನು ಸಾಕ್ಷಾತ್ಕಾರ ಮಾಡಿಕೊಂಡವರು ಯಾವುದೋ ಒಂದು ಕಾಲದಲ್ಲಿ ಹುಟ್ಟಿ ಸತ್ತಿದ್ದರೂ ಸತ್ಯ ಅವರು ಅದನ್ನು ತಿಳಿದುಕೊಳ್ಳುವುದಕ್ಕೆ ಮುಂಚೆ ಇತ್ತು. ಇದನ್ನು ತಿಳಿದುಕೊಳ್ಳುವವರು ಯಾರೂ ಇಲ್ಲದೇ ಇದ್ದರೂ ಅದು ಇಲ್ಲದೆ ಇರಲಿಲ್ಲ. ಸತ್ಯದ ಸನಾತನತ್ವವನ್ನು ಸಾರುವರೇ ಹೊರತು ವ್ಯಕ್ತಿಯ ಪ್ರತಿಷ್ಠೆಯ ಕಡೆ ಗಮನವನ್ನೇ ಕೊಡುವುದಿಲ್ಲ.

ಉಪನಿಷತ್ತಿನಲ್ಲಿ ಬರುವ ಮತ್ತೊಂದು ವೈಶಿಷ್ಟ್ಯವೇ ಸ್ತ್ರೀಯರಿಗೆ ಅಲ್ಲಿರುವ ಒಂದು ಗೌರವಸ್ಥಾನ. ಅನಂತರ ಬಂದ ಶಾಸ್ತ್ರಗಳು ಸ್ತ್ರೀಯರನ್ನು ಎಷ್ಟು ಹಳಿದರೂ ನಿಕೃಷ್ಟ ದೃಷ್ಟಿಯಿಂದ ನೋಡಿದರೂ ಉಪನಿಷತ್ತಿನಲ್ಲಿ ಅವರಿಗೆ ಗಣ್ಯಸ್ಥಾನವಿದೆ. ಪುರುಷನಂತೆ ಈಕೆ ಬ್ರಹ್ಮವಾದಿನಿಯಾಗಿದ್ದಳು. ವೇದಗಳಲ್ಲಿ ಬರುವ ಹಲವು ಸೂಕ್ತಗಳಲ್ಲಿ ಕೆಲವನ್ನು ಸ್ತ್ರೀಯರೇ ರಚಿಸಿದ್ದರೆಂದರೆ ನಮಗೆ ಆಶ್ಚರ್ಯವಾಗುವುದು. ಲೋಪಾಮುದ್ರಾ. ವಿಶ್ವಾವರಾ. ಸಿಕತಾ. ನಿವಾವರಿ. ಘೋಶಾ ಮುಂತಾದುವೆ ಆ ಹೆಸರುಗಳು. ಶಾತ್ತ್ವಿಕ ಪ್ರಪಂಚದಲ್ಲಿ ಮನುಷ್ಯನಿಗೆ ಸರಿಸಮನಾಗಿ ಏರುತ್ತಿದ್ದಳು. ಇಂತಹ ಒಂದೆರಡು ಪ್ರಸಂಗಗಳನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ ನೋಡುತ್ತೇವೆ:

ಯಾಜ್ಞವಲ್ಕ್ಯನಿಗೆ ಇಬ್ಬರು ಹೆಂಡತಿಯರು ಇದ್ದರು. ಒಂದು ದಿನ ಯಾಜ್ಞವಲ್ಕ್ಯನು ಮೈತ್ರೇಯಿಗೆ ಹೀಗೆ ಹೇಳುವನು:

ಯಾಜ್ಞವಲ್ಕ್ಯ: "ಎಲೈ ಮೈತ್ರೇಯಿ, ನಾನು ಈ ಗಾರ್ಹಪತ್ಯ ಆಶ್ರಮವನ್ನು ಬಿಡುತ್ತೇನೆ. ಸರಿ, ನಿನಗೂ

ಈ ಕಾತ್ಯಾಯಿನಿಗೂ ಇರುವ ಸಂಬಂಧವನ್ನು ಅಂತ್ಯ ಗೊಳಿಸುತ್ತೇನೆ."

ಮೈತ್ರೇಯಿ: "ಹೇ ಭಗವನ್, ಧನಪರಿಪೂರ್ಣವಾದ ಈ ಪೃಥ್ವಿಯೆಲ್ಲ ನನಗಿದ್ದರೆ ನಾನು ಅದರ ಮೂಲಕ ಅಮೃತ ಳಾಗುವೆನೆ ?"

ಯಾಜ್ಞವಲ್ಕ್ಯ: "ಇಲ್ಲ, ಉಪಕರಣಗಳುಳ್ಳವರ ಜೀವಿತವು ಹೇಗಿರುವುದೋ ಹಾಗೆಯೇ ನಿನ್ನ ಜೀವಿತವೂ ಆಗುವುದು. ಆದರೆ ಧನದ ಮೂಲಕ ಅಮೃತತ್ವದ ಆಶೆಯಿಲ್ಲ."

ಮೈತ್ರೇಯಿ: "ಯಾವುದರಿಂದ ನಾನು ಅಮೃತಳಾಗುವು ದಿಲ್ಲವೋ ಅದರಿಂದ ಏನುಮಾಡಲಿ? ಹೇ ಭಗವನ್, ನೀವು ಯಾವುದನ್ನು ಅರಿತುಕೋಡಿರುವಿರೋ ಅವನ್ನೇ ನನಗೆ ಹೇಳಿ."

ಯಾಜ್ಞವಲ್ಕ್ಯ: "ಎಲೈ ಮೈತ್ರೇಯಿ, (ಹಿಂದೆಯೂ ಕೂಡ) ನೀನು ನನಗೆ ಪ್ರಿಯಳಾಗಿದ್ದೆ. ಈಗ ಪ್ರಿಯವನ್ನು ಹೇಳುತ್ತಿದ್ದೀಯೆ. ಬಾ ಕುಳಿತುಕೊ, ನಿನಗೆ ವ್ಯಾಖ್ಯಾನ ಮಾಡುತ್ತೇನೆ. ನಾನು ವ್ಯಾಖ್ಯಾನ ಮಾಡುವಾಗ ಏಕಾಗ್ರ ವಾಗಿ ಅದನ್ನು ಧ್ಯಾನಿಸು."

ಅದೇ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಜನಕನ ಆಸ್ಥಾನ ದಲ್ಲಿ ಮತ್ತೊಂದು ದೃಶ್ಯವು ನಮಗೆ ಬರುವುದು. ಜನಕನು ಬಹು ದಕ್ಷಿಣವೆಂಬ ಯಜ್ಞವನ್ನು ಮಾಡಿದನು. ಅಲ್ಲಿ ಕುರು ಪಾಂಚಾಲ ದೇಶದ ಬ್ರಾಹ್ಮಣರು ಬಂದಿದ್ದರು. ಈ ಬ್ರಾಹ್ಮಣ ರಲ್ಲಿ ಹೆಚ್ಚು ಜ್ಞಾನಿ ಯಾವನು ಎಂದು ಜನಕನಿಗೆ ಜಿಜ್ಞಾಸೆ ಯುಂಟಾಯಿತು. ಅವನು ಒಂದು ಸಾವಿರ ಗೋವುಗಳನ್ನು ದೊಡ್ಡಿಯಲ್ಲಿ ಕಟ್ಟಹಾಕಿದನು. ಪ್ರತಿಯೊಂದು ಗೋವಿನ ಕೊಂಬುಗಳಿಗೂ ಹತ್ತು ಚಿನ್ನದ ಪಾದಗಳನ್ನು ಕಟ್ಟಿಸಿದನು.

ಪಂಡಿತರನ್ನು ಕುರಿತು ಜನಕನು ಹೇಳಿದನು: "ಪೂಜ್ಯರಾದ ಬ್ರಾಹ್ಮಣರೆ, ನಿಮ್ಮಲ್ಲಿ, ಬ್ರಹ್ಮಿಷ್ಠನಾದವನು ಗೋವುಗಳನ್ನು ಹೊಡೆದುಕೊಂಡು ಹೋಗಲಿ." ಬ್ರಾಹ್ಮಣರು ಎದೆ ಮಾಡಲು ಸಮರ್ಥರಾಗಲಿಲ್ಲ. ಆಗ ಯಾಜ್ಞವಲ್ಕ್ಯನು ತನ್ನ ಶಿಷ್ಯನಿಗೆ ಈ ಗೋವುಗಳನ್ನೆಲ್ಲಾ ಹೊಡೆದುಕೊಂಡು ಹೋಗು ಎನ್ನುವನು. ಬ್ರಾಹ್ಮಣರು ತಮ್ಮಲ್ಲಿ ಬ್ರಹ್ಮಿಷ್ಠನೆಂದು ಹೇಗೆತಾನೆ ಅವನು ಹೇಳಿಕೊಂಡಾನು ಎಂದು ಕೋಪಗೊಂಡರು. ಅವರಲ್ಲಿ ಒಬ್ಬರಾದ ಮೇಲೆ ಒಬ್ಬರು ಜಟಿಲವಾದ ಪ್ರಶ್ನೆಗಳನ್ನು ಯಾಜ್ಞವಲ್ಕ್ಯನಿಗೆ ಹಾಕತೊಡಗಿದರು. ಅವರೆಲ್ಲ ಸೋತಮೇಲೆ ಗಾರ್ಗಿವಾಚಕ್ನವಿ ಎಂಬ ಬ್ರಹ್ಮವಾದಿನಿ ಎದ್ದಳು. ಗಾರ್ಗಿ: "ಯಾಜ್ಞವಲ್ಕ್ಯ, ನಿನಗೆ ಎರಡು ಪ್ರಶ್ನೆಗಳನ್ನು ಹಾಕುತ್ತೇನೆ. ಹೇಗೆ ಒಬ್ಬ ಕಾಶೀ ದೇಶೀಯನು ಅಥವಾ ವೀರವಂಶೀಯನಾದ ವಿದೇಹರಾಜನು ಹೆದೆ ಇಳಿಸಿದ ಬಿಲ್ಲಿಗೆ ಹೆದೆ ಏರಿಸಿ, ಶತ್ರುಗಳಿಗೆ ಅತಿ ವ್ಯಥೆಯನ್ನುಂಟುಮಾಡುವ ಎರಡು ಶರಗಳನ್ನು ಹಿಡಿದುಕೊಂಡು ಸಮೀಪಿಸುವನೋ ಹಾಗೆಯೇ ನಾನು ಎರಡು ಪ್ರಶ್ನೆಗಳೊಡನೆ ನಿನ್ನನ್ನು ಸಮೀಪಿಸುತ್ತೇನೆ. ನನ್ನ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕೊಡು." ಅನಂತರ ಅವರಿಬ್ಬರ ಸಂಭಾಷಣೆಯಲ್ಲಿ ಅತಿ ಉನ್ನತ ಮಟ್ಟದ ತತ್ತ್ವ ವ್ಯಕ್ತವಾಗುವುದನ್ನು ನೋಡುತ್ತೇವೆ. ಯಾಜ್ಞವಲ್ಕ್ಯನಂತಹ ಪ್ರಚಂಡ ಧೀಮಂತನನ್ನು ಎದುರಿಸಬಲ್ಲ ಬ್ರಹ್ಮವಾದಿನಿಯರು ಇದ್ದರು ಆ ಕಾಲದಲ್ಲಿ.

೨. ಗುರುಶಿಷ್ಯರು

ಉಪನಿಷತ್ತಿನಲ್ಲಿ ಜ್ಞಾನವನ್ನು ತಿಳಿಯಪಡಿಸುವುದಕ್ಕೆ ಪ್ರಶ್ನೋತ್ತರ ವಿಧಾನವನ್ನು ಅನುಸರಿಸುವರು. ಹಿಂದಿನಿಂದಲೂ

ತತ್ತ್ವವನ್ನು ಹೇಳುವುದಕ್ಕೆ ಮೂರು ವಿಧಗಳನ್ನು ಬಳಸಿ ಕೊಂಡಿರುವರು. ಒಂದನೆಯುದೇ ಸಿದ್ಧಾಂತರೂಪವಾಗಿ ಮೊದಲಿನಿಂದ ಕೊನೆಯವರೆಗೆ ಮೆಟ್ಟಲು ಮೆಟ್ಟಲಾಗಿ ಹೇಳು ವುದು. ಭಾರತೀಯರ ತತ್ತ್ವಶಾಸ್ತ್ರದಲ್ಲಿ ಇದು ಬಹಳ ಕಡಿಮೆ ಎನ್ನಬಹುದು. ಪಾಶ್ಚಾತ್ಯ ತತ್ತ್ವಜ್ಞರಾದ ಸ್ಪಿನೋಜ, ಕಾಂಟ್ ಮುಂತಾದವರು ತತ್ತ್ವಸಿದ್ಧಾಂತವನ್ನು ಜಾಮಿಟ್ರಿ ಅಥವಾ ಗಣಿತದ ಸಮಸ್ಯೆಗಳಂತೆ ಮೆಟ್ಟಲು ಮೆಟ್ಟಲಾಗಿ ವಿವರಿಸುವರು. ನಮ್ಮಲ್ಲಿ ಕೆಲವು ಪ್ರಕರಣ ಗ್ರಂಥಗಳು ಮಾತ್ರ ಈ ಸರಣಿಯನ್ನು ಅನುಸರಿಸುವುವು.

ಎರಡನೆಯುದೆ ಕಥಾರೀತಿ ಹೇಳುವುದು ತತ್ತ್ವ ಸಾಧಾರಣ ಮಾನವರಿಗೆ ನೀರಸ. ಆದರೂ ಅದರ ಅಂಶ ಎಲ್ಲ ಜೀವರ ಬಾಳಿಗೂ ಬೇಕಾಗಿದೆ. ಹಾಗೆ ಅದನ್ನು ಆಕರ್ಷಣೀಯ ವನ್ನಾಗಿ ಮಾಡುವುದಕ್ಕೆ ಅವನ್ನು ಒಂದು ಕಥೆಯ ಚೌಕಟ್ಟಿ ನಲ್ಲಿಡುವರು. ಕಥೆಯಿಂದ ಆಕರ್ಷಿತರಾಗಿ ಜನಸಾಮಾನ್ಯರು ಅಲ್ಲಿಗೆ ಬರುವರು. ಹೇಗೋ ಅವರಿಗೆ ಅರಿಯದಂತೆ ತತ್ತ್ವ ಅವರ ಜೀವನ ಪ್ರವೇಶಿಸುವುದು ನಮ್ಮಲ್ಲಿ ಬರುವ ಪುರಾಣಗಳು, ರಾಮಾಯಣ ಮಹಾಭಾರತಗಳು ಈ ಕೆಲಸವನ್ನು ಮಾಡಿವೆ. ಸೂಕ್ಷ್ಮವಾದ ತತ್ತ್ವವನ್ನು ವ್ಯಕ್ತಿಗಳ ಜೀವನ ಮತ್ತು ಘಟನೆ ಗಳ ಮೂಲಕ ವಿವರಿಸಿ ಎಲ್ಲರಿಗೂ ಹಿಡಿಸುವಂತೆ ಮಾಡಿವೆ.

ಮೂರನೆಯುದೆ ಪ್ರಶ್ನೋತ್ತರದ ಮೂಲಕ ತತ್ತ್ವದ ಸಮಸ್ಯೆ ಗಳನ್ನು ವಿವರಿಸುವುದು. ಶಿಷ್ಯ ಯಾವುದಾದರೂ ಪ್ರಶ್ನೆಯನ್ನು ಹಾಕುವನು, ಗುರು ಅದಕ್ಕೆ ಸರಿಯಾಗಿ ಉತ್ತರವನ್ನು ಹೇಳು ವನು. ಉಪನಿಷತ್ತಿನಲ್ಲಿ ಅನುಸರಿಸಿರುವ ವಿಧಾನ ಇದು. ಈ ಮಾರ್ಗ ಉಳಿದೆರಡು ಮಾರ್ಗಕ್ಕಿಂತ ತತ್ತ್ವವನ್ನು ವಿವರಿಸಲು

ಬಹಳ ಅನುಕೂಲ. ಯಾರು ತತ್ತ್ವ ತಿಳಿಯಬೇಕೆಂದು ಇರುವನೋ ಅಂತಹವನು ಮಾತ್ರ ಬರುವನು. ಕಥೆಯ ಕಾಡಿನ ಮೂಲಕ ಅವನು ಸಾಗಿಹೋಗಬೇಕಾಗಿಲ್ಲ. ನೇರವಾಗಿ ತಾತ್ತ್ವಿಕ ಪ್ರಸಂಗಕ್ಕೆ ಬರುವನು. ಇಲ್ಲಿ ಗುರು ಶಿಷ್ಯರಿಬ್ಬರಿಗೂ ಅನ್ಯೋನ್ಯ ಸಂಬಂಧವಿದೆ. ಒಬ್ಬ ಒಂದು ಗ್ರಂಥವನ್ನು ಬರೆಯುವಾಗ ಯಾರ ಹಂಗಿಗೂ ಒಳಪಡದೆ ತಾನು ಏನನ್ನು ಹೇಳಬಯಸುವನೋ ಅದನ್ನು ತನ್ನ ರೀತಿಯಲ್ಲಿ ಬರೆಯುವನು. ಅವನಿಗೂ ಓದುಗನಿಗೂ ಯಾವ ಪ್ರತ್ಯಕ್ಷ ಸಂಬಂಧವೂ ಇರುವುದಿಲ್ಲ. ಆದರೆ ಪ್ರಶ್ನೆ ಉತ್ತರಗಳಲ್ಲಿ ಗುರುವಿಗೆ ಶಿಷ್ಯನ ಸಮಸ್ಯೆ ಚೆನ್ನಾಗಿ ಅರ್ಥವಾಗುವುದು. ಅದನ್ನು ಉಪಹರಿಸಲು ಗುರು ಶಿಷ್ಯನ ಮಟ್ಟಕ್ಕೆ ಇಳಿದು ಬರಬೇಕಾಗಿದೆ. ಆಧ್ಯಾತ್ಮಿಕ ಜೀವನದಲ್ಲಿ ಯಾವಾಗಲೂ ಪ್ರತ್ಯಕ್ಷ ಸಂಬಂಧ ಬಹಳ ಮುಖ್ಯ. ಗುರು ಮಾತಿನ ಮೂಲಕವಾಗಿಯೇ ತಿಳಿಸುವುದಿಲ್ಲ. ಮಾತಿನ ಹಿಂದೆ ಇರುವ ಅವನ ವ್ಯಕ್ತಿತ್ವ ಶಿಷ್ಯನ ಸಮಸ್ಯೆಗಳನ್ನು ಬಗೆಹರಿಸಬಲ್ಲದು. ಅವನಾಡುವ ಮಾತನ್ನು ಪ್ರತ್ಯಕ್ಷ ಕೇಳುವಾಗ ಅದನ್ನೇ ಓದುವಾಗ ಆಗದ ಅನುಭವ ಆಗುವುದು. ಸತ್ಯ ಸಾಕ್ಷಾತ್ಕಾರ ಮಾಡಿಕೊಂಡಿರುವವನ ಧ್ವನಿಯಲ್ಲಿ ಒಂದು ಚೈತನ್ಯವಿದೆ ಕೇಳುವವರೆವೆಗೆ ಅದು ವೇದ್ಯವಾಗದೆ ಇರದು.

ಒಂದು ದೊಡ್ಡ ಬಹಿರಂಗ ಸಭೆಯಲ್ಲಿ ತಾತ್ತ್ವಿಕ ವಿಷಯವನ್ನು ಕೇಳುವುದಕ್ಕೂ ನಿರ್ಜನವಾದ ಪ್ರದೇಶದಲ್ಲಿ ಒಂದೆರಡು ಶಿಷ್ಯರಿದ್ದಾಗ ಗುರು ಆಡುವ ಮಾತನ್ನು ಕೇಳುವುದಕ್ಕೂ ಎಷ್ಟೋ ವ್ಯತ್ಯಾಸವಿದೆ. ಬಹಿರಂಗ ಸಭೆಯಲ್ಲಿ ಮಾತನಾಡುವವನಿಗೆ ಸೂಕ್ಷ್ಮವಾದ ವಿಷಯಗಳನ್ನು ಪ್ರತಿಪಾದಿಸುವುದಕ್ಕೆ ತಕ್ಕ ವಾತಾವರಣವಿರುವುದಿಲ್ಲ. ಒಂದು ವಿಷಯವನ್ನು ಆಳವಾಗಿ

ತಿಳಿದುಕೊಳ್ಳಬೇಕಾದರೆ ಅದಕ್ಕೆ ತಕ್ಕ ವಾತಾವರಣವಿರಬೇಕು. ಗುರು ತನ್ನ ಸಹಜ ಸರಳ ಸ್ಥಿತಿಯಲ್ಲಿರಬೇಕು, ಜನಬಾಹುಳ್ಯ ವಿರಕೂಡದು, ಸ್ಥಳ ಪ್ರಶಾಂತವಾಗಿರಬೇಕು. ಇಂತಹ ಒಂದು ವಾತಾವರಣವನ್ನೇ ನಾವು ಉಪನಿಷತ್ತಿನಲ್ಲಿ ನೋಡುವೆವು. ಗುರುವಿನ ಸಮೀಪದಲ್ಲಿ ಕುಳಿತು ಕಲಿತದ್ದು ಎಂದೇ ಉಪನಿಷತ್ತಿಗೆ ಅರ್ಥ.

ಯಾವ ವಿದ್ಯಾಭ್ಯಾಸದಲ್ಲಾಗಲಿ ಗುರು ಶಿಷ್ಯರ ಸಂಬಂಧ ಅತ್ಯಂತ ಮುಖ್ಯವಾದುದು. ಅದರಲ್ಲಿಯೂ ಅಧ್ಯಾತ್ಮವಿದ್ಯೆ ಯಂತಹ ವಿದ್ಯೆಯನ್ನು ಕಲಿಯಬೇಕಾದರೆ ಈ ಸಂಬಂಧ ಅತಿ ಮುಖ್ಯವಾಗುವುದು. ಇಲ್ಲಿ ಬರೀ .ಜ್ಞಾನವನ್ನು ಮಾತ್ರ ಕೊಡುವುದಲ್ಲ, ಗುರು ತನ್ನ ಸಾಕ್ಷಾತ್ಕಾರದ ಶಕ್ತಿಯನ್ನು ದಾನಮಾಡುವನು. ಉಪನಿಷತ್ತಿನಲ್ಲಿ ಬರುವ ಗುರು ಶಿಷ್ಯರ ಸಂಬಂಧ ಒಂದು ಅತಿ ಪವಿತ್ರವಾದ ಸಂಬಂಧ. ಇದರಿಂದಲೇ ಅಂತಹ ಶ್ರೇಷ್ಠ ಜ್ಞಾನ ಪ್ರಪಂಚಕ್ಕೆ ಬಂದಿತು. ನಮ್ಮವರೆಗೆ ಅದು ಉಳಿದುಕೊಂಡು ಬರಲು ಸಾಧ್ಯವಾಯಿತು.

ಶಿಷ್ಯ ರಾಜನ ಮಗನಾಗಿರಲಿ, ಕೋಟ್ಯಾಧೀಶ್ವರನ ಮಗ ನಾಗಿರಲಿ ಜ್ಞಾನಾರ್ಜನೆ ಮಾಡಬೇಕಾದರೆ ದೈನ್ಯದಿಂದ ಸಮಿತ್ತುಗಳನ್ನು ಹಿಡಿದುಕೊಂಡು ಗುರುವಿನ ಮನೆಗೆ ಹೋಗು ತ್ತಿದ್ದನು. ಗುರುವಿನ ಮನೆಯಲ್ಲಿ ಯಾವ ಕೆಲಸವನ್ನು ಬೇಕಾದರೂ ಮಾಡಲು ಸಿದ್ಧನಾಗಿರುತ್ತಿದ್ದನು. ಗುರುವು ಕೂಡ ಶಿಷ್ಯನನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುತ್ತಿದ್ದನು ಅವನಿಗೆ ಊಟ ಬಟ್ಟೆಗಳನ್ನು ಕೊಟ್ಟು ವಿದ್ಯೆಯನ್ನು ಹೇಳಿಕೊಡುತ್ತಿದ್ದನು. ಬಂದ ವಿದ್ಯಾರ್ಥಿಯನ್ನು ತನ್ನಲ್ಲಿ ಇಟ್ಟುಕೊಳ್ಳಲಾರದೆ ಹಿಂದೆ ಕಳುಹಿಸುವುದು ಅತಿ ಅವಮಾನ ಎಂದು ಆಗಿನ ಕಾಲದಲ್ಲಿ

ಭಾವಿಸಿದ್ದರು. ಯೋಗ್ಯನಾದ ಶಿಷ್ಯನನ್ನು ಗುರು ತನ್ನ ಸ್ವಂತ ಮಗನಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದನು ಮಗ ಕೇವಲ ನನ್ನ ರಕ್ತಮಾಂಸವನ್ನು ಹಂಚಿಕೊಂಡು ಹುಟ್ಟಿರುವವನು. ಅವನು ನಮ್ಮ ಆಲೋಚನೆ ಧ್ಯೇಯ ಆದರ್ಶಗಳಿಗೆ ಹಕ್ಕುದಾರನಾಗುತ್ತಾನೆ ಎನ್ನಲಾಗುವುದಿಲ್ಲ. ಯೋಗ್ಯನಾದ ಶಿಷ್ಯ ಮಾತ್ರ ಅದಕ್ಕೆ ಹಕ್ಕುದಾರನಾಗಬಲ್ಲ. ಗುರು ಆಶಿಸುವುದು ತಾನು ಕಲಿತ ವಿದ್ಯೆ ಅನಂತರವೂ ಮಾನವಕೋಟಿಯ ಕಲ್ಯಾಣಕ್ಕಾಗಿ ಎಂದೆಂದಿಗೂ ಇರಬೇಕೆಂಬುದನ್ನು. ಹಾಗೆ ಅದು ಸಾರೋದ್ಧಾರವಾಗಿ ಬರಬೇಕಾದರೆ ಯೋಗ್ಯ ಶಿಷ್ಯರ ಮೂಲಕ ಮಾತ್ರ ಅದು ಸಾಧ್ಯ. ಜೀವನದಲ್ಲಿ ನಾವು ಏನನ್ನು ಕಲಿಯುತ್ತೇವೋ ಅದು ಕೇವಲ ನಮಗೆ ಮಾತ್ರ ಅಲ್ಲ, ಅದನ್ನು ಇತರರಿಗೆ ಕೊಡಬೇಕು. ಕೊಡುವುದಕ್ಕಾಗಿ ಕಲಿಯಬೇಕು. ಬರೀ ಕಲಿಯುವುದು ಅರ್ಧಭಾಗ ಮಾತ್ರ. ಅದು ಪೂರ್ಣವಾಗುವುದು ಅದನ್ನು ಯೋಗ್ಯನಾದವನಿಗೆ ಧಾರೆ ಎರೆದು ಕೊಟ್ಟಾಗ ಮಾತ್ರ. ಇದರ ತತ್ತ್ವವನ್ನು ಉಪನಿಷತ್ತಿನಲ್ಲಿ ಬರುವ ಋಷಿಗಳು ಅರಿತಿದ್ದರು. ಯಾಗ ಯಜ್ಞಗಳ ಸಮಯದಲ್ಲಿ ಯೋಗ್ಯರಾದ ಶಿಷ್ಯರು ತಮ್ಮ ಬಳಿಗೆ ಬರಲಿ ಎಂದು ಪ್ರಾರ್ಥಿಸುವುದನ್ನು ನೋಡುವೆವು. ತೈತ್ತಿರೀಯ ಉಪನಿಷತ್ತಿನಲ್ಲಿ ಹೀಗೆ ಬರುವುದು: “ಬ್ರಹ್ಮಚಾರಿಗಳು ನನ್ನಲ್ಲಿಗೆ ಬರಲಿ ಸ್ವಾಹಾ. ಬ್ರಹ್ಮಚಾರಿಗಳು ನನ್ನಲ್ಲಿಗೆ ವಿವಿಧ ಕಡೆಗಳಿಂದ ಬರಲಿ ಸ್ವಾಹಾ. ಬ್ರಹ್ಮಚಾರಿಗಳು ನನ್ನಲ್ಲಿಗೆ ಪ್ರಕೃಷ್ಟರೂಪದಿಂದ ಬರಲಿ ಸ್ವಾಹಾ. ಬ್ರಹ್ಮಚಾರಿಗಳು ದಮವುಳ್ಳವರಾಗಿರಲಿ ಸ್ವಾಹಾ. ಬ್ರಹ್ಮಚಾರಿಗಳು ಶಮವುಳ್ಳವರಾಗಿರಲಿ ಸ್ವಾಹಾ. .... ನೀರು ತಗ್ಗಿನ ಪ್ರದೇಶಕ್ಕೆ ಹರಿಯುವಂತೆ, ತಿಂಗಳುಗಳು ಸಂವತ್ಸರವನ್ನು ಸೇರುವಂತೆ

ಬ್ರಹ್ಮಚಾರಿಗಳು ಎಲ್ಲಾ ಕಡೆಯಿಂದಲೂ ಬಂದು ನನ್ನನ್ನು ಸೇರಿಕೊಳ್ಳಲಿ ಸ್ವಾಹಾ.

ಯಾವಾಗ ವಿದ್ಯಾರ್ಥಿಗಳು ಬಂದರೋ ಆಗ ಗುರು ಅವರನ್ನು ಪರೀಕ್ಷಿಸುತ್ತಿದ್ದನು. ಏಕೆಂದರೆ ಅಧ್ಯಾತ್ಮ ವಿದ್ಯೆಯನ್ನು ಕೊಡಬೇಕಾದರೆ ಸ್ವೀಕರಿಸುವವನು ಯೋಗ್ಯನಾಗಿರಬೇಕು. ಅಯೋಗ್ಯನಿಗೆ ಶ್ರೇಷ್ಠವಾದ ವಿದ್ಯೆಯನ್ನು ಹೇಳಿದರೆ ಆ ವಿದ್ಯೆ ನಾಶವಾಗುವುದು ಮಾತ್ರವಲ್ಲ, ತಾನೂ ಕೆಟ್ಟು ಇತರರನ್ನೂ ಕೆಡಿಸುವನು. ಏನೂ ತಿಳಿಯದೆ ಇದ್ದರೆ ಅಪಾಯ ಕಡಿಮೆ. ತಪ್ಪು ತಿಳಿದುಕೊಂಡರೆ ಅವನೂ ಹಾಳು. ಅವನನ್ನು ಅನುಸರಿಸುವವರೂ ಹಾಳು. ಯಾರಿಗೆ ನಾವು ಪರಮಸತ್ಯವನ್ನು ಕೊಡುತ್ತೇವೊ ಅದು ವ್ಯರ್ಥವಾಗದಂತೆ ನೋಡಿಕೊಳ್ಳುವುದು ಗುರುವಿನ ಜವಾಬ್ದಾರಿ. ಅದಕ್ಕಾಗಿ ಗುರು ಶಿಷ್ಯನನ್ನು ಹಲವು ವಿಧದಲ್ಲಿ ಪರೀಕ್ಷಿಸುತ್ತಿದ್ದನು. ಪರೀಕ್ಷೆಯ ಗಾಳಿಯಲ್ಲಿ ಜೊಳ್ಳು ತೂರಿಹೋದ ಮೇಲೆ ಉಳಿದ ಗಟ್ಟಿಯನ್ನು ತೆಗೆದುಕೊಳ್ಳುತ್ತಿದ್ದನು. ಶಿಷ್ಯರು ಬಂದು ಪ್ರಶ್ನೆ ಕೇಳಿದ ತಕ್ಷಣವೇ ಅನೇಕ ವೇಳೆ ಗುರು ಉತ್ತರವನ್ನು ಕೊಡುತ್ತಿರಲಿಲ್ಲ. ಇನ್ನೂ ಕೆಲವು ಕಾಲ ತಾಳುವಂತೆ ಹೇಳುತ್ತಿದ್ದನು. ಕೇವಲ ಕುತೂಹಲದಿಂದ ಪ್ರೇರೇಪಿತನಾಗಿ ಬಂದಿದ್ದರೆ ತಕ್ಷಣ ಉತ್ತರ ಸಿಕ್ಕದೆ ಇದ್ದರೆ ಬೇಜಾರಾಗಿ ಹೊರಟುಹೋಗುತ್ತಿದ್ದರು. ನಿಜವಾಗಿಯೂ ತಿಳಿದುಕೊಳ್ಳಬೇಕೆಂಬ ಆಸಕ್ತಿ ತೀವ್ರವಾಗಿದ್ದರೆ ಅವನು ಕಾಯಲು ಅನುಮಾನಿಸುತ್ತಿರಲಿಲ್ಲ. ಕೆಲವು ವೇಳೆ ನಾವು ಕಾದರೆ ಯಾವ ಪ್ರಶ್ನೆಯನ್ನು ಕೇಳಬೇಕೆಂದು ಬಯಸಿರುವೆವೋ ಅದಕ್ಕೆ ಉತ್ತರ ನಮ್ಮಿಂದಲೇ ಬರುವುದು. ಒಂದು ವೇಳೆ ಬರದೇ ಇದ್ದರೆ ನಮ್ಮ ಮನಸ್ಸು ಅನಂತರ ಗುರು ಹೇಳುವುದನ್ನು ಅರ್ಥಮಾಡಿಕೊಳ್ಳುವ

ಸ್ಥಿತಿಗಾದರೂ ಬರುವುದು. ಇಂತಹ ಒಂದು ಪ್ರಸಂಗವನ್ನೇ ಪ್ರಶ್ನೋಪನಿಷತ್ತಿನಲ್ಲಿ ನೋಡುತ್ತೇವೆ.

“ಭಾರದ್ವಾಜನ ಮಗನಾದ ಸುರೇಶ, ಶಿಬಿಯ ಮಗನಾದ ಸತ್ಯಕಾಮ, ಗರ್ಗಗೋತ್ರದ ಸೌರ್ಯಾಯಣಿ, ಅಶ್ವಲನ ಮಗನಾದ ಕೌಸಲ್ಯ, ವಿದರ್ಭದೇಶದ ಭಾರ್ಗವ ಮತ್ತು ಕತ್ಯನ ಮಗನಾದ ಕಬಂದಿ, ಇವರು ಬ್ರಹ್ಮಪರರೂ ಬ್ರಹ್ಮನಿಷ್ಠರೂ ಆಗಿದ್ದರು. ಅವರು ಪರಬ್ರಹ್ಮನನ್ನು ಅನ್ವೇಷಿಸುವವರಾಗಿ ‘ಇವನೇ ನಿಶ್ಚಯವಾಗಿ ಇವೆಲ್ಲವನ್ನೂ ಹೇಳುವನು’ ಎಂದು ಯೋಚಿಸಿ ಭಗವಂತನಾದ ಪಿಪ್ಪಲಾದನ ಬಳಿಗೆ ಬಂದರು.”

“ಇನ್ನೂ ಒಂದು ವರ್ಷ ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ವಾಸಮಾಡಿ. (ಆಮೇಲೆ) ಇಚ್ಛಾನುಸಾರ ಪ್ರಶ್ನೆಗಳನ್ನು ಕೇಳಿರಿ. ನಮಗೆ ತಿಳಿದಿದ್ದರೆ ಎಲ್ಲವನ್ನೂ ನಿಮಗೆ ಹೇಳುವೆವು” ಎಂದು ಆ ಋಷಿಯು ಅವರಿಗೆ ಹೇಳಿದನು.

ಪ್ರಲೋಭನೆಗಳನ್ನು ಶಿಷ್ಯನ ಮುಂದಿಟ್ಟು ಅವನನ್ನು ಕದಲಿಸಲು ಗುರು ಯತ್ನಿಸುತ್ತಿದ್ದನು. ಕಠೋಪನಿಷತ್ತಿನಲ್ಲಿ ಯಮನ ಬಳಿಗೆ ನಚಿಕೇತ ಹೋದಾಗ ಯಮ ಕೊಟ್ಟ ಮೂರು ವರಗಳಲ್ಲಿ ಎರಡು ವರಗಳನ್ನು ಬಳಸಿಕೊಂಡಾದಮೇಲೆ ನಚಿಕೇತ ಮೂರನೆ ವರಕ್ಕೆ ಮೃತ್ಯು ರಹಸ್ಯವನ್ನು ತಿಳಿಯಲಿಚ್ಛಿಸುವನು. ಯಮ ನಚಿಕೇತನನ್ನು ಪರೀಕ್ಷಿಸುವ ಸನ್ನಿವೇಶ ಹೃದಯಂಗಮವಾಗಿದೆ.

ನಚಿಕೇತ: “ಮನುಷ್ಯನು ಸತ್ತಮೇಲೆ ಈ ಸಂಶಯವುಂಟು. ಕೆಲವರು ಅವನು ಇದ್ದಾನೆ ಎಂದು ಹೇಳುತ್ತಾರೆ. ಕೆಲವರು ಅವನು ಇಲ್ಲ ಎಂದು ಹೇಳುತ್ತಾರೆ. ನಿನ್ನಿಂದ ಉಪದಿಷ್ಟನಾಗಿ

ನಾನು ಇದನ್ನು ತಿಳಿಯಲಿಚ್ಛಿಸುತ್ತೇನೆ. ವರಗಳಲ್ಲಿ ಇದು ಮೂರನೇ ವರ."

ಯಮ: "ಇಲ್ಲಿ ಹಿಂದೆ ದೇವತೆಗಳು ಕೂಡ ಸಂಶಯ ಪಟ್ಟಿದ್ದರು. ಇದನ್ನು ಚೆನ್ನಾಗಿ ತಿಳಿದುಕೊಳ್ಳಲು (ಸಾಮಾನ್ಯರಿಗೆ) ಆಗುವುದಿಲ್ಲ. (ಏಕೆಂದರೆ) ಈ ಧರ್ಮ ಸೂಕ್ಷ್ಮವಾದದ್ದು. ಹೇ ನಚಿಕೇತ, ಬೇರೊಂದು ವರವನ್ನು ಬೇಡು. ನನ್ನನ್ನು ಒತ್ತಾಯಪಡಿಸಬೇಡ. ಈ ವರವನ್ನು ಕೇಳಬೇಡ."

ನಚಿಕೇತ: "ಇಲ್ಲಿ ದೇವತೆಗಳು ಕೂಡ ಸಂಶಯಪಟ್ಟಿದ್ದಾರಷ್ಟೆ. ಹೇ ಯಮನೆ, ಇದು ಚೆನ್ನಾಗಿ ತಿಳಿಯತಕ್ಕದ್ದಲ್ಲವೆಂದು ನೀನೇ ಹೇಳುತ್ತಿರುವೆ. ಇದನ್ನು ಹೇಳುವ ನಿನ್ನಂತಹ ಬೇರೊಬ್ಬನು ಸಿಕ್ಕುವುದಿಲ್ಲ. ಇದಕ್ಕೆ ಸಮಾನವಾದ ಬೇರೆ ಯಾವ ವರವೂ ಇಲ್ಲ."

ಯಮ: "ಶತಾಯುಗಳಾದ ಪುತ್ರ ಪೌತ್ರರನ್ನು ಬೇಡಿಕೊ. ಬಹುಪಶುಗಳನ್ನೂ ಆನೆ ಕುದುರೆಗಳನ್ನೂ ಚಿನ್ನವನ್ನೂ ಭೂಮಿಯನ್ನೂ ವಿಸ್ತೀರ್ಣವಾದ ರಾಜ್ಯವನ್ನೂ ಬೇಡಿಕೊ. ನೀನು ಎಷ್ಟು ವರುಷಗಳು ಬದುಕಲಿಚ್ಛಿಸುವೆಯೊ ಅಷ್ಟು ಕಾಲ ಬದುಕು."

"ಇದಕ್ಕೆ ಸಮಾನವಾದ ವರವು (ಬೇರೆ ಇದೆಯೆಂದು) ಎಣಿಸುವೆಯಾದರೆ (ಅದನ್ನು) ಬೇಡಿಕೊ. ಧನವನ್ನೂ ದೀರ್ಘಾಯುಸ್ಸನ್ನೂ ಬೇಡಿಕೊ. ಹೇ ನಚಿಕೇತ, ಮಹಾ ಭೂಮಿಯಲ್ಲಿ ನೀನು (ರಾಜ)ನಾಗಿರು. (ಎಲ್ಲ) ಕಾಮಗಳಲ್ಲಿಯೂ ನಿನ್ನನ್ನು ಭೋಗಿಯನ್ನಾಗಿ ಮಾಡುತ್ತೇನೆ."

"ಮರ್ತ್ಯಲೋಕದಲ್ಲಿ ಯಾವ ಯಾವ ಕಾಮಗಳು ದುರ್ಲಭವೊ ಆ ಕಾಮಗಳನ್ನೆಲ್ಲಾ ಇಚ್ಛಾನುಸಾರ ಬೇಡಿಕೊ. ಈ

ಅಪ್ಸರ ಸ್ತ್ರೀಯರು ರಥಗಳಿಂದಲೂ ವಾದ್ಯಗಳಿಂದಲೂ ಕೂಡಿರುತ್ತಾರೆ. ಇಂತಹವರು ಮನುಷ್ಯರಿಗೆ ಲಭ್ಯರಲ್ಲ. ನಾನು ಕೊಡುವ ಇವರಿಂದ ಸೇವೆ ಮಾಡಿಸಿಕೊ. ಹೇ ನಚಿಕೇತ, ಮರಣವನ್ನು ಕುರಿತು ಪ್ರಶ್ನಿಸಬೇಡ."

ನಚಿಕೇತ: "ಹೇ ಅಂತಕ, (ಈ ಭೋಗಗಳು) ಕ್ಷಣಿಕವಾದುವು, ಮತ್ತು ಮನುಷ್ಯನ ಇಂದ್ರಿಯಗಳ ತೇಜಸ್ಸನ್ನು ಕ್ಷೀಣಗೊಳಿಸುವುವು. ಎಲ್ಲಾ ಆಯುಸ್ಸೂ ಅಲ್ಪವೇ. ಈ ವಾಹನಗಳೂ ನೃತ್ಯಗೀತೆಗಳೂ ನಿನಗೇ ಇರಲಿ."

"ಮನುಷ್ಯನು ಧನದಿಂದ ತೃಪ್ತಿಪಡತಕ್ಕವನಲ್ಲ. ನಿನ್ನನ್ನು ನೋಡಿದೆವಾದರೆ ಧನವನ್ನು ಹೊಂದುತ್ತೇವೆ. ನೀನು (ಯಾವ್ಯ ಪದವಿಯಲ್ಲಿ) ಆಳುವವರೆಗೆ ಬದುಕುವೆವು. ಆದರೆ ನನಗೆ ಆ ವರವೇ ಬೇಕು."

"ಮುಪ್ಪಿಲ್ಲದ ಅಮರರನ್ನು ಹೊಂದಿ, ತಿಳಿದುಕೊಂಡು, ಕೆಳಗಿರುವವನೂ ಮುಪ್ಪುಳ್ಳವನೂ ಆದ ಯಾವ ಮರ್ತ್ಯನು ವರ್ಣ ರತಿ ಪ್ರಮೋದಗಳನ್ನು ಆಲೋಚಿಸುವವನಾಗಿ ಅತಿ ದೀರ್ಘವಾದ ಜೀವಿತದಲ್ಲಿ ರಮಿಸುವನು?"

"ಹೇ ಮೃತ್ಯು, ಯಾವ ವಿಷಯದಲ್ಲಿ ಈ ಸಂಶಯವನ್ನು ಹೊಂದುತ್ತಾರೆಯೊ, ಯಾವುದು ಪರಲೋಕ ವಿಷಯದ ಮಹಾ ಪ್ರಯೋಜನಕ್ಕೆ ಸಾಧನವೋ, ಅದನ್ನು ನನಗೆ ಹೇಳು. ಯಾವ ಈ ವರವು ಗಹನವಾಗಿ ಒಳಗೆ ಪ್ರವೇಶಿಸಿರುವುದೋ? ಅದಕ್ಕಿಂತ ಬೇರೆ ವರವನ್ನು ನಚಿಕೇತ ಕೇಳುವುದಿಲ್ಲ."

ಯಮನಿಗೆ ಅತ್ಯಂತ ಸಂತೋಷವಾಯಿತು. ನಿನ್ನಂತಹ ಪ್ರಶ್ನೆಯನ್ನು ಕೇಳುವವರು ನಮಗೆ ಸಿಕ್ಕಲಿ ಎನ್ನುವನು. ಇಂತಹ ವಿಷಯವನ್ನು ಹೇಳುವವನು ಆಶ್ಚರ್ಯ, ಪಡೆಯು

ವವನು ಆಶ್ಚರ್ಯ. ಶ್ರೇಷ್ಠತಮ ಗುರುಶಿಷ್ಯರ ಸಮಾಗಮದಿಂದ ಮಾತ್ರ ಆಧ್ಯಾತ್ಮಿಕ ಭೂಮಿಕೆಯಲ್ಲಿ ಸರ್ವಶ್ರೇಷ್ಠ ಭಾವನೆ ಹುಟ್ಟಬೇಕಾದರೆ.

ಆಚಾರ್ಯನು ಶಿಷ್ಯನ ಸತ್ಯಸಂಧತೆಯ ವಿಚಾರವಾಗಿ ಪ್ರಶ್ನಿಸುತ್ತಿದ್ದನು. ಛಾಂದೋಗ್ಯ ಉಪನಿಷತ್ತಿನಲ್ಲಿ ಸತ್ಯಕಾಮ ಜಾಬಾಲ ವಿಷಯದಲ್ಲಿ ನಾವು ಇದನ್ನು ನೋಡುವೆವು.

"ಒಂದು ದಿನ ಸತ್ಯಕಾಮ ಜಾಬಾಲನು ತನ್ನ ತಾಯಿಯಾದ ಜಾಬಾಲೆಯನ್ನು ಕುರಿತು ಪ್ರಶ್ನಿಸಿದನು: 'ಅಮ್ಮ ನಾನು ಸ್ವಾಧ್ಯಾಯಕ್ಕಾಗಿ ಆಚಾರ್ಯನ ಮನೆಯಲ್ಲಿ ಅಭ್ಯಾಸ ಮಾಡಬೇಕೆಂದು ಇರುವೆನು. ನಾನು ಯಾವ ಗೋತ್ರದವನು?'

"ಅವಳು ಸತ್ಯಕಾಮನನ್ನು ಕುರಿತು ಹೇಳಿದಳು: 'ಮಗು, ನೀನು ಯಾವ ಗೋತ್ರದವನೊ ನಾನು ಅರಿಯೆನು. ನಾನು ಬಹುವಾಗಿ ಸೇವೆಮಾಡುತ್ತಿದ್ದ ಪರಿಚಾರಿಣಿಯಾಗಿದ್ದಾಗ ಯೌವನದಲ್ಲಿ ನಿನ್ನನ್ನು ಪಡೆದೆನು. ನೀನು ಯಾವ ಗೋತ್ರದವನೊ ಅದನ್ನು ನಾನು ತಿಳಿಯೆನು. ಆದರೆ ನಾನು ಜಾಬಾಲ, ನೀನು ಸತ್ಯಕಾಮ ಎಂಬ ಹೆಸರಿನವನು. ಆದ್ದರಿಂದ ಸತ್ಯಕಾಮ ಜಾಬಾಲನೆಂದೇ ಹೇಳಿಕೊ.'

"ಸತ್ಯಕಾಮ ಗೌತಮ ಹಾರಿದ್ರು ಮತನ ಬಳಿಗೆ ಬಂದು ಹೀಗೆ ಹೇಳಿದನು: 'ಭಗವಂತನಾದ ನಿನ್ನಲ್ಲಿ ಬ್ರಹ್ಮಚರ್ಯವಾಸ ಮಾಡಬೇಕೆಂದಿರುವೆನು. ಭಗವಂತನನ್ನು ಬಳಿಸಾರಲೆ?'

ಗೌತಮ: "ಸೋಮ್ಯ, ನೀನು ಯಾವ ಗೋತ್ರದವನು?"

ಸತ್ಯಕಾಮ: "ಭೋ, ನಾನು ಯಾವ ಗೋತ್ರದವನೊ ಅದನ್ನು ನಾನು ತಿಳಿಯೆನು. ನಾನು ತಾಯಿಯನ್ನು ಪ್ರಶ್ನಿಸಿದೆನು. ಅವಳು ಹೀಗೆ ಹೇಳಿದಳು: 'ನಾನು ಬಹುವಾಗಿ

ಸೇವೆಮಾಡುತ್ತಿದ್ದ ಪರಿಚಾರಿಣಿಯಾಗಿದ್ದಾಗ, ಯೌವನದಲ್ಲಿ ನಿನ್ನನ್ನು ಪಡೆದೆನು. ನೀನು ಯಾವ ಗೋತ್ರದವನೊ ಅದನ್ನು ನಾನು ತಿಳಿಯೆನು, ಆದರೆ ನಾನು ಜಾಬಾಲ ಎಂಬ ಹೆಸರಿನವಳು. ನೀನು ಸತ್ಯಕಾಮ ಎಂಬ ಹೆಸರಿನವನು.' ಭೋ, ಆದುದರಿಂದ ನಾನು ಸತ್ಯಕಾಮ ಜಾಬಾಲನು."

ಗೌತಮ: "ಅಬ್ರಾಹ್ಮಣನು ಇದನ್ನು ಹೇಳಲಾರನು. ಸೋಮ್ಯ ಸಮಿತ್ತನ್ನು ತೆಗೆದುಕೊಂಡು ಬಾ. ನಿನಗೆ ಉಪ ನಯನ ಮಾಡಿಸುವೆನು. ನೀನು ಸತ್ಯದಿಂದ ಚಲಿಸಲಿಲ್ಲ."

ಕಠೋರವಾದ ಸತ್ಯವನ್ನು ಯಾವನು ಹೇಳಬಲ್ಲನೋ ಅವನು ನಿಜವಾಗಿಯೂ ಬ್ರಹ್ಮೋಪಾಸನೆಗೆ ಯೋಗ್ಯನಾದವನು ಎಂದು ಗುರು ನಿಷ್ಕರ್ಷಿಸುವನು. ಪ್ರಿಯವಾದ, ನಮಗೆ ಕೀರ್ತಿ ಯನ್ನು ತರಬಲ್ಲ ಸತ್ಯವನ್ನು ನಾವು ಹೇಳಲು ಕಾತರರಾಗಿರು ವೆವೇ ಹೊರತು ನಮ್ಮ ಮನೆಗೇ ಅಪಕೀರ್ತಿ ಬರುವಂತಹ ಕಹಿ ಸತ್ಯವನ್ನು ಗುರುವಿನ ಬಳಿ ಹೇಳಬಲ್ಲವರು ಬಹಳ ಅಪರೂಪ.

ಉಪನಿಷತ್ತಿನಲ್ಲಿ ಗುರು ಶಿಷ್ಯನಿಗೆ ಬೋಧಿಸುವ ವಿಧಾನ ಅದ್ಭುತವಾದುದು. ವಿದ್ಯಾಭ್ಯಾಸವೆನ್ನುವುದು ಗುರು ಶಿಷ್ಯರಿಬ್ಬರ ಪರಿಶ್ರಮದಮೇಲೆ ನಿಂತಿದೆ. ಇಬ್ಬರಲ್ಲಿ ಯಾರೊ ಒಬ್ಬರು ಅಣಿಯಾಗಿದ್ದರೆ ಮಾತ್ರ ಸಾಲದು. ಇಬ್ಬರೂ ಅಣಿಯಾಗಿರ ಬೇಕು. ಕೊಡುವವನೂ ಅಣಿಯಾಗಿರಬೇಕು. ಸ್ವೀಕರಿಸುವ ವನೂ ಅಣಿಯಾಗಿರಬೇಕು. ಕೊಡುವವನು ಯಾವಾಗಲೂ ತಾನು ಕೊಡುವ ಸ್ಥಿತಿಯಲ್ಲೇ ಇರುವೆನು ಎಂಬುದನ್ನು ಮರೆತು, ತಾನು ಕೆಲವು ವೇಳೆ ಕಲಿತುಕೊಳ್ಳುವವನೂ ಆಗಲು ಸಿದ್ಧ ನಾಗಿರಬೇಕು. ಹಾಗೆಯೇ ಶಿಷ್ಯ ಬರೀ ಸ್ವೀಕರಿಸುವವನು

ಮಾತ್ರವಲ್ಲ; ವಿಷಯದಮೇಲೆ ಅವನಿಗೆ ಇರುವ ಆಸಕ್ತಿಯಿಂದ ಅದನ್ನು ತಿಳಿದುಕೊಳ್ಳಲು ಇರುವ ಶ್ರದ್ಧಾಭಕ್ತಿಗಳಿಂದ ಪ್ರಶ್ನೆಗಳನ್ನು ಕೇಳಿದಾಗ ಹೊಸ ಹೊಸ ಭಾವಗಳು ಗುರುವಿನ ಮನಸ್ಸಿನಲ್ಲಿ ಸ್ಫುರಿಸುವಂತೆ ಮಾಡಬಲ್ಲ. ಇಬ್ಬರೂ ಎಲ್ಲಿ ಅಣಿಯಾಗಿರುವರೊ ಅಲ್ಲಿ ಸರಿಯಾದ ವಿದ್ಯೆ ಬರಬೇಕಾದರೆ. ಅಧ್ಯಯನವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಗುರು ಶಿಷ್ಯರಿಬ್ಬರೂ ಪ್ರಾರ್ಥಿಸುತ್ತಿದ್ದ ಶಾಂತಿಪಾಠ ಕಲಿಕೆಗೆ ಎಂತಹ ಒಂದು ವಾತಾವರಣವನ್ನು ಸೃಷ್ಟಿಸುತ್ತಿತ್ತು ಎಂಬುದನ್ನು ನಾವು ಕೆಳಗೆ ಬರುವ ಶಾಂತಿಪಾಠದಲ್ಲಿ ನೋಡುವೆವು :

"ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ. ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ. ಜೊತೆಯಲ್ಲಿ ಸಾಮರ್ಥ್ಯವನ್ನುಂಟುಮಾಡುವಂತಾಗಲಿ. ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಿರಲಿ. ನಾವು ಪರಸ್ಪರ ದ್ವೇಷ ಮಾಡದೆ ಇರುವಂತಾಗಲಿ."

"ಜೊತೆಯಲ್ಲಿ ಸಾಮರ್ಥ್ಯವನ್ನುಂಟುಮಾಡಲಿ." ಹೇಳುವವನಿಗೆ ವಿಷಯಗಳನ್ನು ಆಮೂಲಾಗ್ರವಾಗಿ ಶಿಷ್ಯನ ಹೃದಯಕ್ಕೆ ಮನದಟ್ಟಾಗುವಂತೆ ಹೇಳುವ ಸಾಮರ್ಥ್ಯ ಇರಬೇಕು. ಬರೀ ವಿಷಯ ಗೊತ್ತಿರುವವರಿಗೆಲ್ಲ ಈ ಸಾಮರ್ಥ್ಯ ಇರಲಾಲಾರದು. ವಿಷಯವನ್ನು ತನಗೆ ತಾನೇ ತಿಳಿದುಕೊಳ್ಳಬಹುದು. ಅದನ್ನು ಮತ್ತೊಬ್ಬನಿಗೆ ಅರ್ಥವಾಗುವಂತೆ ಹೇಳಬೇಕಾದರೆ ಅದೊಂದು ಕಲೆ, ದೈವದತ್ತವಾಗಿ ಬಂದದ್ದು ಮತ್ತು ಅದಕ್ಕೆ ನಮ್ಮ ಶ್ರಮವೂ ಇರಬೇಕು. ಹಾಗೆಯೇ ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯ, ಕೇಳಿದವರೆಲ್ಲರಿಗೂ ಈ ವಿಷಯವನ್ನು ಪೂರ್ಣ ಗ್ರಹಿಸುವ ಸಾಮರ್ಥ್ಯ ಇರಲಾರದು. ಒಂದೇ

ತರಗತಿಯಲ್ಲಿ ಒಬ್ಬ ಉಪಾಧ್ಯಾಯನೇ ಹಲವು ಹುಡುಗರಿಗೆ ಪಾಠ ಹೇಳುತ್ತಿದ್ದರೂ ಕೊನೆಗೆ ನಾನು ಏನು ಹೇಳಿದೆ ಎಂದು ಕೇಳಿದಾಗ, ಒಬ್ಬೊಬ್ಬ ಹುಡುಗನೂ ತಿಳಿದುಕೊಂಡಿರುವುದರಲ್ಲಿ ತರತಮದ ವ್ಯತ್ಯಾಸ ಇರುವುದನ್ನು ನಾವು ನೋಡುವೆವು. ವಿಷಯವನ್ನು ಅರಿಯುವುದೂ ಒಂದು ಸಾಮರ್ಥ್ಯ. ಅದಕ್ಕೆ ಕಲಿಯುವವನ ಆಸಕ್ತಿ ಭಕ್ತಿ ಶ್ರದ್ಧೆ ಏಕಾಗ್ರತೆಗಳೆಲ್ಲ ಬೇಕಾಗಿವೆ. ಆದಕಾರಣವೇ ಇಬ್ಬರಿಗೂ ಭಗವಂತ ಆ ಸಾಮರ್ಥ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಿದ್ದರು.

"ನಮ್ಮ ಇಬ್ಬರ ಅಧ್ಯಯನ ತೇಜಸ್ವಿಯಾಗಿರಲಿ." ಗುರುಶಿಷ್ಯರ ಅಧ್ಯಯನ ತೇಜಸ್ಸಿನಿಂದ ಕೂಡಿರಬೇಕು. ಅಲ್ಲಿ ಹೊಸದೊಂದು ಬೆಳಕು ಬರಬೇಕು. ಒಂದು ಹೆಜ್ಜೆ ಮುಂದೆ ಹೋಗಬೇಕು, ಹಿಂದಿನವಕ್ಕಿಂತ ಈಗ ಸ್ಪಷ್ಟವಾಗಿರಬೇಕು, ಹೆಚ್ಚು ಸಂಶಯಕ್ಕೆ ಅತೀತನಾಗಿ ಹೋಗಿರಬೇಕು. ಜ್ಞಾನ ಯಾವಾಗಲೂ ಒಂದು ವೃಕ್ಷದಂತೆ ಬೆಳೆಯುತ್ತಾ ಹೋಗಬೇಕು. ಅದು ಬರೀ ಒಂದು ನಕಲು ಆಗಿರಕೂಡದು. ಇವೆಲ್ಲ 'ತೇಜಸ್' ಎಂಬ ಪದದಲ್ಲಿ ಧ್ವನಿತವಾಗಿದೆ.

"ನಾವು ಪರಸ್ಪರ 'ದ್ವೇಷ ಮಾಡದೆ ಇರುವಂತಾಗಲಿ.' ಇದೊಂದು ಅತಿ ಸುಂದರವಾದ ಭಾವನೆ. ಗುರುವಿಗೆ ಶಿಷ್ಯನ ವಿಷಯದಲ್ಲಿ ಅಸೂಯೆ ಇರಕೂಡದು. ಶಿಷ್ಯ ಎಲ್ಲಿ ಪಾಂಡಿತ್ಯದಲ್ಲಿ ನನ್ನನ್ನು ಮೀರಿಹೋಗುವನೊ, ನಾನು ಅವನ ಕೀರ್ತಿಯಲ್ಲಿ ಎಲ್ಲಿ ಮ್ಲಾನವಾಗಿ ಹೋಗುವೆನೊ ಎಂದು ಗುರು ಎಂದೂ ಭಾವಿಸುತ್ತಿರಲಿಲ್ಲ. ಶಿಷ್ಯನ ಕೀರ್ತಿಯಲ್ಲಿ ಕರಗಿ ಹೋಗುವ ಸುದಿನ ಬರಲಿ ಎಂದು ಗುರು ಆಶಿಸುತ್ತಿದ್ದ. ಎಂತಹ ಉದಾರ ಭಾವನೆ! ತನಗೆ ಏನು ಗೊತ್ತಿತ್ತೋ

ಅದನ್ನೆಲ್ಲಾ ಸ್ವಲ್ಪವೂ ಬಚ್ಚಿಡದೆ ಗುರು ಶಿಷ್ಯನಿಗೆ ಹೇಳುತ್ತಿದ್ದ. ಜ್ಞಾನವನ್ನು ರಕ್ಷಿಸಲು ಪ್ರಪಂಚದಲ್ಲಿ ಒಂದೇ ಸ್ಥಳ ಇರುವುದು. ಅದೇ ಯೋಗ್ಯ ಶಿಷ್ಯನ ಹೃದಯ. ಮತ್ತೆಲ್ಲಿ ಅದನ್ನು ಬಚ್ಚಿಟ್ಟರೂ ಹಾಳಾಗುವುದು.

ಗುರು ತನಗೆ ಯಾವುದು ಗೊತ್ತಿರಲಿಲ್ಲವೋ ಅದನ್ನು ಶಿಷ್ಯನ ಮುಂದೆ ಸಂಕೋಚವಿಲ್ಲದೆ ಒಪ್ಪಿಕೊಳ್ಳುತ್ತಿದ್ದ. ಹಾಗೆಯೇ ಶಿಷ್ಯನೂ ಕೂಡ ಗುರುವನ್ನು ಗೌರವಿಸುತ್ತಿದ್ದ. ಯಾವನು ಅಜ್ಞಾನದಿಂದ ಪಾರುಮಾಡಿರುವನೋ ಅಂತಹ ಗುರುವನ್ನೇ ಶಿಷ್ಯ, ಬ್ರಹ್ಮ ವಿಷ್ಣು ಮಹೇಶ್ವರ ಎಂದು ಸ್ತುತಿಸುತ್ತಿದ್ದನು. ಬ್ರಹ್ಮವಿದ್ಯೆಯನ್ನು ಇತ್ತ ಗುರುವಿನ ಋಣವನ್ನು ಯಾರೂ ತೀರಿಸಲಾರರು. ನಾವು ಅದರಂತೆ ಬಾಳಿ ಯೋಗ್ಯನಾದವನಿಗೆ ಅನಂತರ ಕೊಟ್ಟರೆ ಮಾತ್ರ ಸ್ವಲ್ಪಮಟ್ಟಿಗೆ ಅದನ್ನು ತೀರಿಸಿದಂತೆ. ಶಿಷ್ಯ ಎಂತಹ ಕೀರ್ತಿಯ ಶಿಖರದಲ್ಲಿರಲಿ, ಪ್ರಪಂಚವೇ ಅವನನ್ನು ಕೊಂಡಾಡುತ್ತಿರಲಿ, ಅವನ ಚಿತ್ತ ಮಾತ್ರ ಗುರುವಿನ ಪಾದಕಮಲಗಳಲ್ಲಿರುವುದು: ಇವೆಲ್ಲ ಗುರುವಿನ ಆಶೀರ್ವಾದ ಫಲ ಎಂದು ತನಗೆ ಬಂದುದನ್ನೆಲ್ಲಾ ಶ್ರೀ ಗುರುವಿಗೆ ಯೋಗ್ಯ ಶಿಷ್ಯ ಅರ್ಪಿಸುತ್ತಿರುವನು. ಇಲ್ಲಿ ದ್ವೇಷಕ್ಕೆ ಅಸೂಯೆಗೆ ಎಳ್ಳಷ್ಟೂ ಅವಕಾಶವಿಲ್ಲ. ಅದಿದ್ದರೆ ಬ್ರಹ್ಮವಿದ್ಯೆ ಬಹುದೂರ. ಇಂತಹ ಗುರುಶಿಷ್ಯರ ಪವಿತ್ರ ವಾತಾವರಣದಲ್ಲಿ ಉಪನಿಷತ್ತುಗಳು ರಚಿತವಾದವು.

ಗುರು, ಶಿಷ್ಯ ಬಂದು ಕೇಳಿದೊಡನೆಯೆ ಹೇಳಲು ಕಾತರನಾಗಿರಲಿಲ್ಲ. ಶಿಷ್ಯ ಏನನ್ನು ತಿಳಿದುಕೊಂಡಿರುವನೊ ಮುಂಚೆ ಅದನ್ನು ತಿಳಿದುಕೊಂಡು ಅನಂತರ ಅದರಿಂದ ಮುಂದಕ್ಕೆ ಶಿಷ್ಯನನ್ನು ಮೆಟ್ಟಲು ಮೆಟ್ಟಲಾಗಿ ಕರೆದುಕೊಂಡು ಹೋಗುತ್ತಿದ್ದರು.

ಕ್ರಮ ಕ್ರಮವಾಗಿ ಶಿಷ್ಯನನ್ನು ಮೇಲಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದ್ದಕ್ಕಿದ್ದಂತೆಯೇ ಉತ್ತಮೋತ್ತಮ ಸತ್ಯವನ್ನು ಹೇಳಿದರೆ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ಈ ರಹಸ್ಯವನ್ನು ಉಪನಿಷತ್ತಿನ ಋಷಿಗಳು ತಿಳಿದಿದ್ದರು. ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದ ಸನತ್ಕುಮಾರರ ಸಂವಾದಕ್ಕೆ ಬ್ರಹ್ಮವಿದ್ಯೆಯನ್ನು ಕಲಿಯಲು ಬರುವನು. ಆ ಪ್ರಸಂಗವನ್ನು ನಾವಿಲ್ಲಿ ನೋಡುವ:

“ನಾರದನು ಸನತ್ಕುಮಾರನ ಬಳಿಸಾರಿ ‘ಭಗವಂತನೆ, ನನಗೆ ಉಪದೇಶಿಸಬೇಕು’ ಎಂದನು. ಸನತ್ಕುಮಾರನು ಹೇಳಿದನು, ‘ನೀನು ಯಾವುದನ್ನು ಮೊದಲೇ ಅರಿತುಕೊಂಡಿರುವೆಯೋ ಅದನ್ನು ಹೇಳುವುದರ ಮೂಲಕ ನನ್ನ ಬಳಿಗೆ ಬಾ. ಅದಕ್ಕಿಂತ ಮುಂದಿರುವುದನ್ನು ಉಪದೇಶಿಸುತ್ತೇನೆ.’

ನಾರದ: “ಭಗವಂತನೆ, ಋಗ್ವೇದವನ್ನು ಅರಿತಿದ್ದೇನೆ. ಯಜುರ್ವೇದ, ಸಾಮವೇದ, ನಾಲ್ಕನೆಯದಾದ ಅಥರ್ವ, ಐದನೆಯದಾದ ಇತಿಹಾಸ ಪುರಾಣ, ವೇದಗಳ ವೇದ, ಪಿತ್ರ್ಯ, ಗಣಿತ, ದೈವ, ನಿಧಿಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ನಿರುಕ್ತ, ಬ್ರಹ್ಮವಿದ್ಯೆ, ಭೂತವಿದ್ಯೆ, ಧನುರ್ವೇದ, ಜ್ಯೋತಿಷ, ಸರ್ಪವಿದ್ಯೆ, ದೇವಜನವಿದ್ಯೆ—ಇವುಗಳನ್ನೆಲ್ಲಾ ಭಗವಂತನೇ ಅರಿತಿದ್ದೇನೆ.”

“ನೀನು ಏನೇನು ಅರಿತಿರುವೆಯೋ ಅದೆಲ್ಲ ಹೆಸರೇ” ಎನ್ನುವನು ಸನತ್ಕುಮಾರ. ‘ನಾಮಕ್ಕಿಂತ ಅಧಿಕವಾದದ್ದು ಇದೆಯೆ, ಎಂದು ಕೇಳಿದಾಗ ಅದಕ್ಕಿಂತ ವಾಕ್ ಅಧಿಕ ಎನ್ನುವನು. ವಾಕ್‌ಗಿಂತ ಅಧಿಕವಾದುದು ಇದೆಯೆ ಎಂದು ಕೇಳಿದಾಗ, ಮನಸ್ಸು ಅದಕ್ಕಿಂತ ಅಧಿಕ ಎನ್ನುವನು. ಅಲ್ಲಿಂದ ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನ, ಹೀಗೆ ಭೂಮದವರೆಗೆ ಶಿಷ್ಯನನ್ನು

ಮೆಟ್ಟಲು ಮೆಟ್ಟಲಾಗಿ ಕರೆದುಕೊಂಡು ಹೋಗಿ ಭೂಮದ ಬಾಗಿಲಲ್ಲಿ ನಿಲ್ಲಿಸಿ "ಯಾವುದು ಭೂಮವೋ ಅದು ಸುಖವು, ಅಲ್ಪದರಲ್ಲಿ ಸುಖವಿಲ್ಲ, ಭೂಮವೇ ಸುಖವು. ಭೂಮವನ್ನೇ ತಿಳಿದುಕೊಳ್ಳಲು ಬಯಸಬೇಕು. ಎಲ್ಲಿ ಬೇರೊಂದನ್ನು ನೋಡು ವುದಿಲ್ಲವೊ ಬೇರೊಂದನ್ನು ಅರಿಯುವುದಿಲ್ಲವೊ, ಅದೇ ಭೂಮವು. ಆದರೆ ಎಲ್ಲಿ ಬೇರೊಂದನ್ನು ನೋಡುವನೋ, ಬೇರೊಂದನ್ನು ಕೇಳುವನೋ, ಬೇರೊಂದನ್ನು ಅರಿಯುವನೋ ಅದು ಅಲ್ಪ. ಯಾವುದು ಭೂಮವೋ ಅದು ಅಮೃತ; ಯಾವುದು ಅಲ್ಪವೋ ಅದು ಮರ್ತ್ಯ." ಶಿಷ್ಯ ಮೇಲಿನ ಮೆಟ್ಟಲಿಗೆ ಹತ್ತಿಹೋಗಲು ಅಣಿಯಾಗಿರಬೇಕು. ಅವಕ್ಕೆ ಅವನು ಕಾತರ ವನ್ನು ವ್ಯಕ್ತಪಡಿಸಬೇಕು. ಆಗ ಗುರುವಿನ ಹಸ್ತ ಅವನನ್ನು ಮೇಲಕ್ಕೆ ಒಯ್ಯಲು ಸಿದ್ಧವಾಗಿರುವುದನ್ನು ನೋಡುವೆವು.

ಗುರು ಶಿಷ್ಯನಿಗೆ ಬೋಧಿಸುವಾಗ ಶಿಷ್ಯನ ವಿಚಾರಶಕ್ತಿ ಯನ್ನು ಕುಂಠಿತಮಾಡುತ್ತಿರಲಿಲ್ಲ. ಅದನ್ನು ಪ್ರಚೋದಿಸು ತ್ತಿದ್ದನು. ಗುರು ಏನು ಹೇಳುವನೊ ಅದನ್ನು ವಿಚಾರಮಾಡಿ ಆಲೋಚನೆಮಾಡಿ ಅದರ ಒಳಗೆ ಇರುವುದನ್ನು ನಾವು ತಿಳಿದು ಕೊಳ್ಳುವುದಕ್ಕೆ ಶಕ್ತಿಯನ್ನು ಪಡೆಯಬೇಕು. ನಾವು ಯಾವ ಒಂದು ವಿಷಯವನ್ನು ಹೊಸದಾಗಿ ತಿಳಿದುಕೊಳ್ಳಬೇಕಾದರೂ ಅದು ನಮ್ಮ ಮನಸ್ಸಿನ ಸ್ವಾಸ್ಥ್ಯವನ್ನು ಕೆಡಿಸುವುದು; ನಮ್ಮ ಮನಸ್ಸಿನಲ್ಲಿ ಆಂದೋಳನವಾಗುವುದು; ನೆಮ್ಮದಿ ಕೆಡುವುದು. ಹೊಸದಾಗಿ ಯಾವುದನ್ನು ಕಲಿಯಬೇಕಾದರೂ ಅದಕ್ಕೆ ನಾವು ಬೆಲೆಯನ್ನು ಕೊಡಬೇಕು. ಆ ಬೆಲೆಯೇ ಶ್ರಮ. ಶ್ರಮವಿಲ್ಲದೆ ನಾವೇನನ್ನೂ ಕಲಿಯಲಿಕ್ಕಾಗುವುದಿಲ್ಲ. ಶ್ರಮವಿಲ್ಲದೇ ಕಲಿತದ್ದು ಎಂದಿಗೂ ನಮ್ಮದಾಗುವುದಿಲ್ಲ. ನಮ್ಮ ಮನಸ್ಸಿನಮೇಲೆ

ಕೆಲವು ಕಾಲ ತಾರಾಡುತ್ತಿದ್ದು ಅನಂತರ ನಾಯಿವಾಗುವುದೇ ಹೊರತು ಎಂದಿಗೂ ನಮ್ಮ ಶಾಶ್ವತ ಜ್ಞಾನಭಂಡಾರವಾಗುವುದಿಲ್ಲ. ಉಪನಿಷತ್ತಿನ ಋಷಿಗಳು ಶಿಷ್ಯರಲ್ಲಿ ಇಂತಹ ದೃಷ್ಟಿಯನ್ನು ಬೀರುತ್ತಿದ್ದರು. ಶಿಷ್ಯ ಗುರು ಹೇಳುವುದನ್ನು ಕುರಿತು ಆಲೋಚನೆಮಾಡಿ ಪುನಃ ಗುರುವಿನ ಸಮೀಪಕ್ಕೆ ಬಂದು ನೀವು ಹೇಳಿದ್ದು ಇದೇನೆ ಎಂದು ಅನುಮಾನದಿಂದ ಕೇಳಬೇಕು. ಆಗ ಗುರು ಮೆಚ್ಚಿ ಒಂದು ಮೆಟ್ಟಿಲು ಮೇಲಕ್ಕೆ ಕರೆದುಕೊಂಡು ಹೋಗುತ್ತಿದ್ದನು. ಛಾಂದೋಗ್ಯ ಉಪನಿಷತ್ತಿನಲ್ಲಿ ದೇವಾಸುರರು ಆತ್ಮವಿದ್ಯೆಯನ್ನು ಕಲಿಯಲು ಪ್ರಜಾಪತಿಯ ಬಳಿಗೆ ಹೋದಾಗ ಇದನ್ನು ನೋಡುವೆವು. ವಿರೋಚನ ಇಂದ್ರ ಇಬ್ಬರೂ ಆತ್ಮನನ್ನು ಬಯಸುತ್ತ ಪ್ರಜಾಪತಿಯ ಬಳಿಗೆ ಹೋದರು. ಪ್ರಜಾಪತಿ "ಕಣ್ಣಿನಲ್ಲಿ ಯಾವ ಪುರುಷನು ಕಾಣಿಸುವನೋ ಅವನೇ ಆತ್ಮ, ಇದೇ ಅಮೃತ, ಅಭಯ, ಇದೇ ಬ್ರಹ್ಮ" ಎಂದನು. ಅವರು ಪ್ರಶ್ನಿಸಿದರು: "ಭಗವಂತನೆ, ಹಾಗಾದರೆ ನೀರಿನಲ್ಲಿಯೂ ಕನ್ನಡಿಯಲ್ಲಿಯೂ ಕಂಡುಬರುತ್ತಿರುವ ಇವರಲ್ಲಿ ಆತ್ಮನು ಯಾರು?" ಪ್ರಜಾಪತಿ: "ಅವನೇ ಇವುಗಳಲ್ಲೆಲ್ಲಾ ಕಂಡುಬರುತ್ತಿರುವನು. ನೀರು ತುಂಬಿರುವ ಒಂದು ಪಾತ್ರೆಯಲ್ಲಿ ನಿಮ್ಮನ್ನು ನೋಡಿಕೊಳ್ಳಿರಿ ಮತ್ತು ಆತ್ಮನ ವಿಷಯದಲ್ಲಿ ಏನನ್ನು ತಿಳಿಯುವುದಿಲ್ಲವೋ ಅದನ್ನು ಹೇಳಿರಿ."

ಅವರು ನೀರಿನ ಪಾತ್ರೆಯಲ್ಲಿ ತಮ್ಮನ್ನು ನೋಡಿಕೊಂಡರು. ಅನಂತರ ಪ್ರಜಾಪತಿ ಅವರನ್ನು ಕೇಳಿದನು: "ಏನನ್ನು ನೋಡುತ್ತೀರಿ?" ಅವರು: "ನಾವಿಬ್ಬರೂ ಈ ಸಮಗ್ರ ಶರೀರವನ್ನು—ರೋಮನಖಗಳವರೆಗೆ ಇರುವ ಪ್ರತಿಬಿಂಬವನ್ನು ನೋಡುತ್ತಿದ್ದೇವೆ."

ಪ್ರಜಾಪತಿ: "ಚೆನ್ನಾಗಿ ಅಲಂಕೃತರಾಗಿ ಉತ್ತಮ ವಸ್ತ್ರಗಳನ್ನು ಧರಿಸಿಕೊಂಡು ಪರಿಷ್ಕೃತರಾಗಿ ನೀರಿನ ಪಾತ್ರೆಯಲ್ಲಿ ನಿಮ್ಮನ್ನು ನೋಡಿಕೊಳ್ಳಿ."

ಅವರು ನೋಡಿಕೊಂಡರು. ಏನನ್ನು ನೋಡುತ್ತೀರಿ ಎಂದು ಪ್ರಜಾಪತಿ ಕೇಳಿದನು.

ಅವರು ನಮ್ಮಂತೆಯೇ ಅಲಂಕರಿಸಿಕೊಂಡಿರುವ ಎರಡು ಪ್ರತಿಬಿಂಬವನ್ನು ನೋಡುತ್ತಿರುವೆವು ಎಂದರು. ಪ್ರಜಾಪತಿ "ಇವನೇ ಆತ್ಮ, ಇದೇ ಅಮೃತ, ಅಭಯ, ಇದೇ ಬ್ರಹ್ಮ" ಎಂದನು. ಇಬ್ಬರೂ ಶಾಂತರಾಗಿ ಹೊರಟುಹೋದರು. ಪ್ರಜಾಪತಿ ಅವರನ್ನು ನೋಡುತ್ತ, "ಆತ್ಮನನ್ನು ಪಡೆದುಕೊಳ್ಳದೆ, ಅರಿತುಕೊಳ್ಳದೇ ಇವರು ಹೋಗುತ್ತಿದ್ದಾರೆ. ಇವರಲ್ಲಿ ಯಾರೇ ಆಗಲಿ ಉಪನಿಷತ್ತನ್ನು ಹೀಗೆ ಅರಿತುಕೊಂಡಿದ್ದರೆ ಅವರು ಭ್ರಷ್ಟರಾಗುತ್ತಾರೆ" ಎಂದನು. ವಿರೋಚನ ದೇಹವೇ ಆತ್ಮ, ಅದನ್ನು ಪೂಜಿಸಬೇಕು, ಸೇವಿಸಬೇಕು, ಇದರಿಂದಲೇ ಇಹಪರಗಳನ್ನು ಪಡೆದುಕೊಳ್ಳುತ್ತಾರೆ ಎಂದು ಅಸುರರಿಗೆ ಬೋಧಿಸತೊಡಗಿದನು.

ಇಂದ್ರನಾದರೋ ಕೆಲವು ಕಾಲದ ಮೇಲೆ ಇದನ್ನು ಅನುಮಾನಿಸತೊಡಗಿದನು. ಈ ಶರೀರ ಚೆನ್ನಾಗಿದ್ದರೆ ಛಾಯೆಯೂ ಚೆನ್ನಾಗಿರುವುದು. ಈ ಶರೀರಕ್ಕೆ ಯಾವುದಾದರೂ ಹೀನವಾದರೆ ಪ್ರತಿಬಿಂಬವೂ ಹಾಗೆಯೇ ಆಗುವುದು. ಇದರಲ್ಲಿ ಆನಂದ ಏನಿರಬಹುದು ಎಂದು ಪುನಃ ಗುರುವಿನ ಬಳಿ ಸಾರಿದನು. ಅಲ್ಲಿ ಪುನಃ ಮುವತ್ತೆರಡು ವರ್ಷ ಬ್ರಹ್ಮಚರ್ಯದಲ್ಲಿ ಕಳೆದಾದಮೇಲೆ ಗುರುವು ಸ್ವಪ್ನದಲ್ಲಿರುವುದೇ ಆತ್ಮ ಎನ್ನುವನು. ಇಂದ್ರ ಪುನಃ ಕೆಲವು ಕಾಲದಮೇಲೆ ಬಂದು ಅನೇಕವೇಳೆ ಸ್ವಪ್ನ ನಮ್ಮ

ಕೃತವಾದರೂ ಯಾವಾಗಲೂ ನಮಗೆ ಪ್ರಿಯವಾದ ಕನಸೇ ಆಗುವುದಿಲ್ಲ. ಅದರಲ್ಲಿ ಯಾವ ಆನಂದ ಇರಬಲ್ಲುದೆಂದು ಅನುಮಾನಿಸಿ ಬಂದನು. ಆಗ ಗುರು ಅವನನ್ನು ಸುಷುಪ್ತಿಯ ಕಡೆ ತೋರಿದನು. ಅಲ್ಲಿ ಕಷ್ಟವಿಲ್ಲದೇ ಇದ್ದರೂ ಯಾವ ಸುಖವೂ ಇಲ್ಲದಿರುವುದನ್ನು ಇಂದ್ರ ಅನುಭವಿಸಿ ಪುನಃ ಗುರುವಿನ ಬಳಿಗೆ ಅನುಮಾನದಿಂದ ಬಂದನು. ಕೊನೆಗೆ ಅವನನ್ನು ಎಲ್ಲಾ ಅವಸ್ಥೆಗೆ ಅತೀತವಾದ ಸ್ಥಿತಿಗೆ ಒಯ್ಯುವನು.

ಅನುಮಾನವೆಂಬ ಅಂಕುಶ ನಮ್ಮನ್ನು ತಿವಿಯದೆ ಇದ್ದರೆ ನಾವು ಮುಂದುವರಿಯುವುದೇ ಇಲ್ಲ. ಇದ್ದ ಕಡೆಯಲ್ಲಿಯೇ ಇರುವೆವು. ನಾವು ಏನು ತಿಳಿದುಕೊಂಡಿರುವೆವೋ ಅದೇ ಪರಮ ಸತ್ಯವೆಂದು ಭಾವಿಸುವೆವು. ತಾನು ಏನು ತಿಳಿದುಕೊಂಡಿದ್ದಾನೆಯೊ ಅದು ಸರಿಯೆ ತಪ್ಪೆ ಎಂದು ತನ್ನಲ್ಲಿ ತರ್ಕಿಸಬೇಕು. ಮತ್ತೆ ಯಾರೊ ಅದನ್ನು ಬಗೆಹರಿಸಿ ಹೇಳುವುದಲ್ಲ. ಗುರು ಬಗೆಹರಿಸಲು ಸಿದ್ಧನಾಗಿರಬಹುದು. ಆದರೆ ಶಿಷ್ಯ ಅನುಮಾನಿಸಿ ಗುರುವಿನ ಬಳಿಗೆ ಬಂದಾಗ ಮಾತ್ರ ಗುರು ಸಹಾಯಮಾಡಲು ಸಿದ್ಧನಾಗಿರುವನು. ಇಲ್ಲಿ ಗುರು ಶಿಷ್ಯನಿಗೆ ತಾನೇ ಒಂದು ಸ್ವತಂತ್ರ ನಿರ್ಣಯಕ್ಕೆ ಬರುವುದಕ್ಕೆ ಸಹಾಯ ಮಾಡುವನೇ ಹೊರತು ಅವನೇ ಆ ನಿರ್ಣಯವನ್ನು ಪ್ರಥಮದಲ್ಲೇ ಹೇಳಿ ಬಿಡುವುದಿಲ್ಲ. ನಮ್ಮ ವಿದ್ಯೆ ಬೇರುಬಿಟ್ಟು ನಮ್ಮ ಹೃದಯದಲ್ಲಿ ಸ್ಥಿರವಾಗಿ ನಿಲ್ಲಬೇಕಾದರೆ ಇದೊಂದೇ ಅದಕ್ಕೆ ಮಾರ್ಗ.

ಕೆಲವು ವೇಳೆ ಗುರು ಪ್ರತ್ಯಕ್ಷವಾಗಿ ಶಿಷ್ಯನಿಗೆ ಏನನ್ನೂ ಬೋಧನೆಯನ್ನೇ ಮಾಡುತ್ತಿರಲಿಲ್ಲ. ಪರೋಕ್ಷವಾಗಿ ಸತ್ಯ ಅದನಲ್ಲಿ ಸ್ಫುರಿಸುವುದಕ್ಕೆ ವಾತಾವರಣವನ್ನು ಕಲ್ಪಿಸುತ್ತಿದ್ದನು. ಇದೊಂದು ನವೀನ ರೀತಿ.

ಛಾಂದೋಗ್ಯ ಉಪನಿಷತ್ತಿನಲ್ಲಿ ಸತ್ಯಕಾಮ ಗೌತಮನ ಬಳಿಗೆ ಬ್ರಹ್ಮವಿದ್ಯೆಯನ್ನು ಕಲಿಯಲು ಬಂದರೆ ಗುರು ಅವನಿಗೆ ಕೃಶವೂ ದುರ್ಬಲವೂ ಆದ ನಾನೂರು ಗೋವುಗಳನ್ನು ಕೊಟ್ಟು ಇವುಗಳನ್ನು ಮೇಯಿಸಿಕೊಂಡು ಬಾ ಎನ್ನುವನು. ಸತ್ಯಕಾಮ ನಾದರೊ ಸ್ವಲ್ಪವೂ ಜುಗುಪ್ಸೆ ತಾಳದೆ ಇವು ಸಹಸ್ರವಾಗುವವರೆಗೆ ತಾನು ಹಿಂತಿರುಗುವುದಿಲ್ಲ ಎಂದು ಅವುಗಳನ್ನು ಕಾಡಿಗೆ ಹೊಡೆದುಕೊಂಡು ಹೋಗುವನು. ಈ ಗೋವುಗಳು ಒಂದು ಸಾವಿರವಾದಮೇಲೆ ಮಂದೆಯಲ್ಲಿದ್ದ ಒಂದು ಹೋರಿ "ನಾವು ಈಗ ಒಂದು ಸಾವಿರವಾಗಿದ್ದೇವೆ, ಗುರುವಿನ ಮನೆಗೆ ಹೊಡೆದು ಕೊಂಡು ಹೋಗು" ಎನ್ನುವುವು. ನಿನಗೆ ಬ್ರಹ್ಮದ ಒಂದು ಪಾದವನ್ನು ಉಪದೇಶಿಸುತ್ತೇನೆ ಎಂದು ಹೇಳಿ "ಪೂರ್ವ ದಿಕ್ಕು ಒಂದು ಕಲೆ, ಪಶ್ಚಿಮ ದಿಕ್ಕು ಒಂದು ಕಲೆ, ದಕ್ಷಿಣ ದಿಕ್ಕು ಒಂದು ಕಲೆ, ಉತ್ತರ ದಿಕ್ಕು ಒಂದು ಕಲೆ, ನಿನಗೆ ಅಗ್ನಿಯು ಇನ್ನೊಂದು ಪಾದವನ್ನು ಹೇಳುವನು" ಎಂದಿತು. ಮಾರನೆ ದಿನ ಸಂಜೆ ಅಗ್ನಿಯ ಮುಂದೆ ಸತ್ಯಕಾಮ ಕುಳಿತಾಗ, ಅಗ್ನಿಯಿಂದ ಧ್ವನಿ ಯೊಂದು ಬರುವುದು: "ಪೃಥ್ವಿಯು ಒಂದು ಕಲೆ, ಅಂತರಿಕ್ಷ ಒಂದು ಕಲೆ, ದ್ಯುಲೋಕ ಒಂದು ಕಲೆ, ಸಮುದ್ರ ಒಂದು ಕಲೆ. ಹಂಸ ಮತ್ತೊಂದು ಪಾದವನ್ನು ಉಪದೇಶಿಸುವುದು" ಎನ್ನುವುದು. ಮಾರನೆ ದಿನ ಹಂಸ ಬಂದು "ಅಗ್ನಿ ಒಂದು ಕಲೆ, ಸೂರ್ಯ ಒಂದು ಕಲೆ, ಚಂದ್ರ ಒಂದು ಕಲೆ, ವಿದ್ಯುತ್ ಒಂದು ಕಲೆ, ಮುದ್ಗವೆಂಬ ಹಕ್ಕಿ ನಾಲ್ಕನೇ ಪಾದವನ್ನು ಹೇಳುವುದು" ಎನ್ನುವುದು. ಮುದ್ಗ ಅವನ ಬಳಿಗೆ ಹಾರಿ ಬಂದು "ಪ್ರಾಣ ಒಂದು ಕಲೆ, ಚಕ್ಷುಸ್ಸು ಒಂದು ಕಲೆ, ಶ್ರೋತ್ರ ಒಂದು ಕಲೆ, ಮನಸ್ಸು ಒಂದು ಕಲೆ, ಇದೇ ಪರಬ್ರಹ್ಮದ

ನಾಲ್ಕನೆಯ ಪಾದ" ಎನ್ನುವುದು. ಆಚಾರ್ಯನ ಮನೆಗೆ ಬಂದಾಗ ಸತ್ಯಕಾಮನನ್ನು ನೋಡಿ ಗುರು, "ಸೋಮ್ಯ, ನೀನು ಬ್ರಹ್ಮಜ್ಞಾನಿಯಂತೆ ಹೊಳೆಯುತ್ತಿರುವೆ. ಯಾರು ನಿನಗೆ ಉಪದೇಶಿಸಿದರು?" ಎಂದು ಕೇಳುವನು. "ಮನುಷ್ಯರಲ್ಲದ ಬೇರೆಯವರು. ಆದರೆ ನೀವು ನನಗೆ ಉಪದೇಶಿಸಬೇಕು" ಎನ್ನುವನು. ಸತ್ಯಕಾಮ ಮುಂಚೆ ಯಾವುದನ್ನು ಬೇರೆ ಬೇರೆ ವಸ್ತುಗಳಿಂದ ಕೇಳಿದ್ದನೊ ಅದನ್ನೇ ಗುರು ಪುನಃ ಉಪದೇಶಿಸಿದನು.

ಶಿಷ್ಯನಿಗೆ ವಿದ್ಯೆಯನ್ನು ದಾನಮಾಡುವುದೊಂದು ಅತಿ ಸೂಕ್ಷ್ಮಕಲೆ. ಅದರಲ್ಲಿ ಪರಿಣತರಾಗಿದ್ದರು ಉಪನಿಷತ್ತಿನ ಋಷಿಗಳು. ಗುರು ಶಿಷ್ಯನ ಒಳಗಣ್ಣನ್ನು ತೆರೆಯುವಂತೆ ಮಾಡುತ್ತಿದ್ದನು. ಆಗ ಇಡೀ ಪ್ರಕೃತಿಯೇ ಒಂದು ಸಜೀವ ಶಾಸ್ತ್ರವಾಗುವುದು. ಪ್ರಕೃತಿಯ ದೃಶ್ಯಗಳು, ಹಕ್ಕಿಗಳು ಗಹನವಾದ ತತ್ತ್ವಶಾಸ್ತ್ರವನ್ನು ಶಿಷ್ಯನ ಹೃದಯದಲ್ಲಿ ಸ್ಫುರಿಸುವಂತೆ ಮಾಡುವುವು. ಈಗಿನ ಕಾಲದ ವಿಧ್ಯಾಭ್ಯಾಸ ತತ್ತ್ವಗಳಿಗೂ ಇನ್ನೂ ನಿಲುಕದ ಅತ್ಯಂತ ಆಧುನಿಕವಾದ ಪ್ರಯೋಗಗಳು ಹೇಗೆ ಆಗಿನ ಕಾಲದಲ್ಲಿ ಜಾರಿಯಲ್ಲಿತ್ತೆಂಬುದನ್ನು ನೋಡಬಹುದು

ಇಲ್ಲಿ ಒಬ್ಬ ವಿದ್ಯೆಯನ್ನು ಕಲಿಯುವುದಕ್ಕೆ ಮಾತ್ರವಲ್ಲ ಕೊಡುವುದಕ್ಕೆ ತಪಸ್ಸು ಮಾಡಿರುವನೊ, ಅವನ ಬಗೆಗಣ್ಣಿಗೆ ಹೊಳೆಯದ ರೀತಿನೀತಿಗಳಿಲ್ಲ. "ಆತ್ಮವಿದ್ಯಾ ತಪೋ ಮೂಲಂ" ಎಂದು ಶ್ವೇತಾಶ್ವತರ ಉಪನಿಷತ್ತಿನಲ್ಲಿ ನೋಡುವೆವು. ಆತ್ಮವಿದ್ಯಾದಾನ ಅಷ್ಟೇ ದೊಡ್ಡ ತಪಸ್ಸು. ಇಂತಹ ತಪಸ್ವಿಗಳ ದರ್ಶನವಾಗುವುದು ಉಪನಿಷತ್ತಿನಲ್ಲಿ.

೩. ತತ್ತ್ವ

ಉಪನಿಷತ್ತಿನಲ್ಲಿ ಯಾವ ನಿರ್ದಿಷ್ಟವಾದ ಸಿದ್ಧಾಂತವನ್ನೂ (System) ನೋಡುವುದಿಲ್ಲ. ಎಲ್ಲಾ ಸಿದ್ಧಾಂತಗಳಿಗೂ ಸಾಮಾನ್ಯವಾದ ಭಾವನೆಗಳಿವೆ. ಉಪನಿಷತ್ತಿನಲ್ಲಿರುವ ತತ್ತ್ವವನ್ನು ದ್ವೈತವೆಂದಾಗಲಿ, ಅದ್ವೈತವೆಂದಾಗಲಿ, ವಿಶಿಷ್ಟಾದ್ವೈತವೆಂದಾಗಲಿ ನಾವು ಕರೆಯಲಾಗುವುದಿಲ್ಲ. ಆಯಾ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಆಚಾರ್ಯರು ಉಪನಿಷತ್ತಿಗೆ ತಮ್ಮ ತಮ್ಮದೇ ದೃಷ್ಟಿಯಿಂದ ಭಾಷ್ಯಗಳನ್ನು ಬರೆದಿರಬಹುದು. ಆದರೆ ಯಾವುದೋ ಒಂದು ಸರಿ, ಒಂದು ತಪ್ಪು ಎಂದು ನಾವು ಉಪನಿಷತ್ತಿನ ದೃಷ್ಟಿಯಿಂದ ನೋಡಿದರೆ ಹೇಳಲಾಗುವುದಿಲ್ಲ. ಅಲ್ಲಿ ಎಲ್ಲವೂ ಇದೆ. ಬಹುಶಃ ನಾವು ಇದುವರೆಗೆ ಯಾವುದನ್ನು ಆಲೋಚಿಸಿಲ್ಲವೋ ಅದೂ ಇರಬಹುದು. ಇಲ್ಲಿ ಸಗುಣ ಬ್ರಹ್ಮನಿಗೆ ಸಂಬಂಧಪಟ್ಟ ವಿವರಣೆಗಳಿವೆ, ನಿರ್ಗುಣನಿಗೆ ಸಂಬಂಧಪಟ್ಟ ವಿವರಣೆಗಳಿವೆ. ಅವನು ಕಾಲದೇಶ ಕಾರ್ಯಕಾರಣ ಜಗತ್ತಿಗೆ ಮೀರಿರುವವನೂ ಹೌದು. ಕಾಲದೇಶದ ಪ್ರಪಂಚದೊಳಗೆ ಏನಿದೆಯೊ ಅದರಲ್ಲೆಲ್ಲಾ ಅವನು ಓತಪ್ರೋತನೂ ಆಗಿರುವನು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಗಾರ್ಗಿ ಜನಕನ ಆಸ್ಥಾನದಲ್ಲಿ ಕೇಳಿದ ಅಕ್ಷರಬ್ರಹ್ಮನ ಪ್ರಶ್ನೆಗೆ ಯಾಜ್ಞವಲ್ಕ್ಯನ ಉತ್ತರ ಎಷ್ಟು ಗಂಭೀರವಾಗಿದೆ.

"ಗಾರ್ಗಿ, ಅದೇ ಅಕ್ಷರ ಎಂದು ಬ್ರಾಹ್ಮಣರು ಹೇಳುತ್ತಾರೆ. ಅದು ಅಸ್ಥೂಲ, ಅನಣು, ಅಹ್ರಸ್ವ, ಅದೀರ್ಘ, ಅಲೋಹಿತ, ಅಸ್ನೇಹ, ಅಚ್ಛಾಯು, ಅತಮಸ್ಸು, ಅವಾಯು, ಅನಾಕಾಶ, ಅಸಂಗ ಅರಸ, ಅಗಂಧ, ಅಚಕ್ಷು, ಅಶ್ರೋತ್ರ, ಅವಾಕ್ಕು, ಅಮನಸ್ಸು, ಅತೇಜಸ್ಸು, ಅಪ್ರಾಣ, ಅಮುಖ, ಅಮಾತ್ರ,

ಅನಂತರ ಅಬಾಹ್ಯ. ಅದು ಯಾವುದನ್ನೂ ತಿನ್ನುವುದಿಲ್ಲ. ಅದನ್ನು ಯಾವುದೂ ತಿನ್ನುವುದಿಲ್ಲ."

"ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ, ಸೂರ್ಯ ಚಂದ್ರರು ತಮ್ಮ ಸ್ಥಾನದಲ್ಲಿ ನಿಲ್ಲಿಸಲ್ಪಟ್ಟಿದ್ದಾರೆ. ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ, ದ್ಯುಲೋಕ, ಪೃಥ್ವಿಗಳು ತಮ್ಮ ಸ್ಥಾನದಲ್ಲಿ ನಿಲ್ಲಿಸಲ್ಪಟ್ಟಿವೆ. ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ, ನಿಮಿಷಗಳು ಮುಹೂರ್ತಗಳು, ಅಹೋರಾತ್ರಿಗಳು, ಪಕ್ಷಗಳು ಮಾಸಗಳು ವರ್ಷಗಳು ತಮ್ಮ ತಮ್ಮ ಸ್ಥಾನದಲ್ಲಿ ನಿಲ್ಲಿಸಲ್ಪಟ್ಟಿವೆ. ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ, ಕೆಲವು ನದಿಗಳು ಪೂರ್ವವಾಹಿನಿಯರಾಗಿಯೂ, ಇನ್ನು ಕೆಲವು ಪಶ್ಚಿಮವಾಹಿನಿಗಳಾಗಿಯೂ, ಮತ್ತೆ ಕೆಲವು ಆಯಾ ದಿಕ್ಕುಗಳಲ್ಲಿಯೂ ಹರಿಯುತ್ತಿರುತ್ತವೆ. ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ, ಮನುಷ್ಯರು ದಾನಿಗಳನ್ನು ಹೊಗಳುತ್ತಾರೆ. ದೇವತೆಗಳು ಯಜಮಾನನನ್ನೂ, ಪಿತೃಗಳು ದರ್ವೀ ಹೋಮವನ್ನೂ ಅವಲಂಬಿಸುತ್ತಾರೆ."

"ಯಾವನು ಗಾರ್ಗಿ, ಈ ಅಕ್ಷರವನ್ನು ತಿಳಿದುಕೊಳ್ಳದೆ ಅನೇಕ ಸಹಸ್ರವರುಷಗಳವರೆಗೆ ಈ ಲೋಕದಲ್ಲಿ ಹೋಮ ಮಾಡುತ್ತಾನೆಯೊ ಯಾಗಮಾಡುತ್ತಾನೆಯೋ, ಅವನ ಆ ಕರ್ಮಫಲವು ನಶ್ವರವೇ ಆಗುವುದು. ಯಾವನು ಗಾರ್ಗಿ. ಈ ಅಕ್ಷರವನ್ನು ತಿಳಿದುಕೊಳ್ಳದೆ ಈ ಲೋಕದಿಂದ ಹೋಗುವನೊ ಅವನು ಕೃಪಣನು. ಆದರೆ ಗಾರ್ಗಿ, ಯಾವನು ಈ ಅಕ್ಷರವನ್ನು ತಿಳಿದುಕೊಂಡು ಈ ಲೋಕದಿಂದ ಹೋಗುವನೊ ಅವನು ಬ್ರಹ್ಮವಿದನು."

ಬ್ರಹ್ಮ ಈ ಪ್ರಪಂಚವನ್ನು ಸೃಷ್ಟಿಸಿದ. ಸೃಷ್ಟಿಸುವುದಕ್ಕೆ ಮುಂಚೆ ತಪಸ್ಸುಮಾಡಿದ ಎನ್ನುವುದು ಪ್ರಶ್ನೋಪನಿಷತ್ತು.

ಸೃಷ್ಟಿ ಒಂದು ಮಕ್ಕಳ ಆಟವಲ್ಲ. ಸೃಷ್ಟಿಗೆ ತಳಹದಿ ಬ್ರಹ್ಮನ ತಪಸ್ಸು. ಮಾನವ ಒಂದು ಸಣ್ಣ ಮನೆ ಕಟ್ಟಲು, ಒಂದು ಕ್ಷುದ್ರ ಯಂತ್ರವನ್ನು ತಯಾರುಮಾಡಲು ಎಷ್ಟು ಆಲೋಚನೆ ಮಾಡುತ್ತಾನೆ. ಕೆಲವು ದಿನಗಳ ಹಿಂದೆ ರಷ್ಯ ದೇಶದವರು ಒಬ್ಬನನ್ನು ಆಕಾಶಕ್ಕೆ ಕಳುಹಿಸಿದರು. ಅವನು ಭೂಮಿಯ ಆಕರ್ಷಣದಿಂದ ಕಿತ್ತುಕೊಂಡುಹೋಗಿ ಭೂಮಿಯನ್ನು ಒಂದು ಪ್ರದಕ್ಷಿಣೆಮಾಡಿ ಹೊರಟಸ್ಥಳಕ್ಕೆ ಮರಳಿ ಕೇವಲ ಒಂದೂವರೆ ಘಂಟೆಯಲ್ಲಿ ಬಂದನು ಎಂಬುವನ್ನು ಕೇಳಿದಾಗ ಜನರ ಆಶ್ಚರಿಗೆ ಪಾರವಿರಲಿಲ್ಲ. ಈ ಒಂದು ಸಾಹಸವನ್ನು ಯಶಸ್ವಿಯಾಗಿ ನೆರವೇರಿಸಲು ಎಷ್ಟು ವಿಜ್ಞಾನಿಗಳು ಎಷ್ಟುಕಾಲ ಇದಕ್ಕಾಗಿ ತಪಸ್ಸುಮಾಡಿದರು! ಬ್ರಹ್ಮನಾದರೊ ಅನಂತ ಗ್ರಹ ಚಂದ್ರ ತಾರೆ ನೀಹಾರಿಕೆಗಳನ್ನು ಆಕಾಶಕ್ಕೆ ಎಸೆದಿರುವನು. ಅವು ಹೇಗೆ ಯಾವ ಘರ್ಷಣೆಯೂ ಇಲ್ಲದೆ, ಹೆಚ್ಚುಕಡಿಮೆಯಿಲ್ಲದೆ ಸುತ್ತುತ್ತಿವೆ. ಇಲ್ಲಿ ಒಂದು ಸಣ್ಣ ಕಣವನ್ನು ತಿಳಿಯಲೆತ್ನಿಸಲಿ, ಜೀವಾಣುವನ್ನು ತಿಳಿಯಲೆತ್ನಿಸಲಿ, ಅವನ ಚಾತುರ್ಯ ಘನ ವಿದ್ವಾಂಸರನ್ನೂ ಅಣಕಿಸುವಂತಿದೆ. ನಾವು ಈ ಪ್ರಪಂಚವನ್ನು ತಿಳಿಯಲೆತ್ನಿಸಿದಾಗ ಅರ್ಥವಾಗುವುದು ಸೃಷ್ಟಿಕರ್ತನ ಚಾತುರ್ಯ.

ಬ್ರಹ್ಮ ಆದಿಯಲ್ಲಿ ಪ್ರಾಣ (Life) ಮತ್ತು ಭೂತ (Matter) ಎರಡನ್ನು ಸೃಷ್ಟಿಮಾಡಿದ. ಅನಂತರ ಅವೆರಡೂ ನಾನಾ ರೀತಿಗಳಲ್ಲಿ ಮಿಶ್ರವಾಗಿ ವೈವಿಧ್ಯಪೂರ್ಣವಾದ ಈ ಜಗತ್ತು ಆಯಿತು. ಕಣದಿಂದ ನೀಹಾರಿಕೆಯವರೆಗೆ ಆ ಭೂತ ಬೇರೆ ಬೇರೆ ರೂಪದಲ್ಲಿರುವುದನ್ನು ನೋಡುವೆವು. ಜೀವಾಣುವಿನಿಂದ

ಮನುಷ್ಯನವರೆಗೆ ಪ್ರಾಣ ಬೇರೆ ಬೇರೆ ರೂಪದಲ್ಲಿ ಪ್ರಪಂಚದಲ್ಲಿರುವುದನ್ನು ನೋಡುವೆವು.

ಬ್ರಹ್ಮನೇ ಸೃಷ್ಟಿಗೆ ಉಪಾದಾನಕಾರಣ ಮತ್ತು ನಿಮಿತ್ತ ಕಾರಣ. ತನ್ನಿಂದಲೇ ಪ್ರಪಂಚವನ್ನು ಸೃಷ್ಟಿಸುವನು. ಸೃಷ್ಟಿಸಿ ಅದಮೇಲೆ ಅದನ್ನು ಪ್ರವೇಶಿಸುವನು. ಚರಾಚರ ಜಗತ್ತಿನಲ್ಲೆಲ್ಲಾ ಓತಪ್ರೋತನಾಗಿರುವನು ಬ್ರಹ್ಮ.

ಮುಂಡಕೋಪನಿಷತ್ತಿನಲ್ಲಿ ಬ್ರಹ್ಮ ಹೇಗೆ ಸೃಷ್ಟಿಸಿದ ಎಂಬುದನ್ನು ವಿವರಿಸುವರು: "ಹೇಗೆ ಜೇಡರಹುಳು (ನೂಲನ್ನು) ಹೊರಕ್ಕೆ ತಂದು ಪುನಃ ಒಳಕ್ಕೆ ತೆಗೆದುಕೊಳ್ಳುವುದೊ, ಹೇಗೆ ಭೂಮಿಯಲ್ಲಿ ಸಸ್ಯಗಳು ಹುಟ್ಟುತ್ತವೆಯೊ, ಹೇಗೆ ಜೀವಂತರಾದ ಮನುಷ್ಯರಿಂದ ಕೇಶರೋಮಗಳು ಬೆಳೆಯುತ್ತವೆಯೊ ಹಾಗೆಯೇ ಅಕ್ಷರದಿಂದ ಇಲ್ಲಿ ಸಮಸ್ತ ಜಗತ್ತು ಉಂಟಾಗುವುದು."

ಅವನು ಹೇಗೆ ಪ್ರಪಂಚದಲ್ಲಿ ಹೊಕ್ಕಿರುವನು ಎಂಬುದನ್ನು ಶ್ವೇತಾಶ್ವತರ ಉಪನಿಷತ್ತು ಹೀಗೆ ವಿವರಿಸುವುದು: "ತಿಲದಲ್ಲಿ ತೈಲದಂತೆ. ದಧಿಯಲ್ಲಿ ಬೆಣ್ಣೆಯಂತೆ. ಚಿಲುಮೆಯಲ್ಲಿ ನೀರಿನಂತೆ. ಅರಣಿಯಲ್ಲಿ ಅಗ್ನಿಯಂತೆ, ಆತ್ಮನಲ್ಲಿ ಆತ್ಮನನ್ನು ನೋಡುವನು."

ಜೀವಿ ಕೂಡ ಬ್ರಹ್ಮನಿಂದ ಸಿಡಿದು ಬಂದವನು. ಅವನಲ್ಲಿರುವ ಪರಿಪೂರ್ಣತೆ, ಜ್ಞಾನ ಇವೆಲ್ಲಾ ಜೀವಿಯಲ್ಲಿ ಸುಪ್ತಾವಸ್ಥೆಯಲ್ಲಿವೆ. ನಮ್ಮ ಆಧ್ಯಾತ್ಮಿಕ ಸಾಧನೆ ಎಂದರೆ ಸುಪ್ತಾವಸ್ಥೆಯಲ್ಲಿರುವುದನ್ನು ವ್ಯಕ್ತಾವಸ್ಥೆಗೆ ತರುವುದೇ ಹೊರತು ಬೇರಾವುದೋ ಮೊದಲಿಲ್ಲದ ಹೊಸ ಗುಣವನ್ನು ಪಡೆಯುವುದಲ್ಲ

"ಇದು ಸತ್ಯ. ಪ್ರಜ್ವಲಿತವಾದ ಅಗ್ನಿಯಿಂದ ಅಗ್ನಿರೂಪವಾದ ಕಿಡಿಗಳು ಹೇಗೆ ಸಹಸ್ರಶಃ ಹುಟ್ಟುತ್ತವೆಯೊ ಹಾಗೆಯೇ

ಎಲೈ ಸೌಮ್ಯ, ಅಕ್ಷರದಿಂದ ವಿವಿಧವಾದ ಜೀವಿಗಳು ಹುಟ್ಟು ತ್ತವೆ ಮತ್ತು ಅವರಲ್ಲೇ ಲೀನವಾಗುತ್ತವೆ.''

ನಾವು ಅವನನ್ನು ಪಡೆಯುವುದು ಎಂದರೆ ಅವನಲ್ಲಿ ಒಂದಾ ಗುವುದು. ನಮ್ಮ ವ್ಯಕ್ತಿತ್ವ, ನದಿ ಹೇಗೆ ಸಾಗರವನ್ನು ಸೇರಿದಾಗ ತನ್ನ ನಾಮರೂಪಗಳನ್ನು ಕಳೆದುಕೊಳ್ಳುವುದೊ ಹಾಗೆ ಆಗುವುದು.

'' ಹೇಗೆ ಹರಿಯುತ್ತಿರುವ ನದಿಗಳು ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅದೃಶ್ಯವಾಗುವುವೋ ಹಾಗೆಯೇ ವಿದ್ವಾಂಸನು ನಾಮರೂಪಗಳಿಂದ ಬಿಡುಗಡೆ ಹೊಂದಿ ಪರಾ ತ್ಪರನೂ ದಿವ್ಯನೂ ಆದ ಪುರುಷನನ್ನು ಹೊಂದುವನು.''

'' ಯಾವನು ಆ ಪರಬ್ರಹ್ಮವನ್ನು ತಿಳಿದುಕೊಳ್ಳುವನೋ ಅವನು ಬ್ರಹ್ಮವೇ ಆಗುವನು.''

ಜೀವಿ ಬಂದಿರುವುದು ಬ್ರಹ್ಮದಿಂದ, ಹೋಗುವುದು ಬ್ರಹ್ಮ ನಲ್ಲಿಗೆ, ಇರುವಾಗಲೂ ಅವನು ಆ ಬ್ರಹ್ಮನಲ್ಲಿಯೇ ಇದ್ದರೂ ನಾಮರೂಪಗಳ ಗೋಜಿನಲ್ಲಿ ಸಿಕ್ಕಿ ತನ್ನ ನೈಜಸ್ವಭಾವವನ್ನು ಮರೆತಿರುವನು. ತನ್ನ ಹಿಂದಿರುವ ಎಲ್ಲ ಜೀವಿಗಳ ಸಾಮಾನ್ಯ ಹಿನ್ನೆಲೆಯಾದ ಬ್ರಹ್ಮನನ್ನು ಮರೆತಿರುವನು. ನಾವು ಎಲ್ಲಿಯ ವರೆಗೆ ಇದನ್ನು ತತ್ತ್ವತಃ ತಿಳಿಯುವುದಿಲ್ಲವೋ ಅಲ್ಲಿಯವರೆಗೆ ಪ್ರಪಂಚಕ್ಕೆ ಬಂದು ಹೋಗಬೇಕಾಗುವುದು. ನಾವು ಇದೇ ಮೊದಲಲ್ಲ ಸಂಸಾರಕ್ಕೆ ಬಂದಿರುವುದು. ಎಷ್ಟೋ ವೇಳೆ ಬಂದಿರು ವೆವು, ಮುಂದೆಯೂ ಪೂರ್ಣತೆಯನ್ನು ಪಡೆಯುವವರೆಗೆ ಹೋಗಿಬರಬೇಕಾಗುವುದು. ನಮ್ಮ ನೈಜಸ್ಥಿತಿ ದೇಹ, ಇಂದ್ರಿಯ, ಮನಸ್ಸು, ಬುದ್ಧಿಗಳ ಆಚೆ ಇರುವುದು. ಈ ಪ್ರಪಂಚಕ್ಕೆ ಬಂದ ಮೇಲೆ ನಾವು ದೇಹ ಮನಸ್ಸು ಬುದ್ಧಿಯನ್ನು ಉಪಯೋಗಿಸು

ತ್ತಿರಬಹುದು. ಆದರೆ ಅವೇ ನಾವಲ್ಲ. ಉಪಯೋಗಿಸುತ್ತ ಉಪಯೋಗಿಸುತ್ತ ನಾವೇ ಅವು ಎಂಬ ಭ್ರಮೆ ನಮ್ಮನ್ನು ಮೆಟ್ಟಿಕೊಂಡಿದೆ. ಈ ಭ್ರಮೆಯಿಂದ ಪಾರಾಗಬೇಕಾಗಿದೆ ನಾವು. ನಾವು ಕಠೋಪನಿಷತ್ತಿನಲ್ಲಿ ಇದನ್ನು ಓದುತ್ತೇವೆ: "ಆತ್ಮನು ಅದ್ವಿತೀಯನು, ವಶೀ, ಸರ್ವಪ್ರಾಣಿಗಳ ಅಂತರಾತ್ಮ, ಒಂದು ರೂಪವನ್ನು ಬಹುರೂಪವಾಗಿ ಮಾಡಿಕೊಂಡಿರುವನು. ಆತ್ಮನಲ್ಲಿರುವ ಅವನನ್ನು ಯಾವ ವಿವೇಕಿಗಳು ನೋಡುತ್ತಾರೆಯೊ ಅವರಿಗೇ ಶಾಶ್ವತವಾದ ಸುಖ, ಇತರರಿಗಲ್ಲ." "ಆತ್ಮನು ಅನಿತ್ಯ ವಸ್ತುಗಳಲ್ಲಿ ನಿತ್ಯನು, ಚೇತನರಿಗೆ ಚೈತನ್ಯನು, ಒಬ್ಬನೇ ಆಗಿದ್ದರೂ ಬಹು ಜೀವರಿಗೆ ಕರ್ಮಫಲಗಳನ್ನು ಕೊಡುತ್ತಾನೆ ಆತ್ಮನಲ್ಲಿರುವ ಅವನನ್ನು ಯಾವ ವಿವೇಕಿಗಳು ನೋಡುತ್ತಾರೆಯೊ ಅವರಿಗೆ ಶಾಶ್ವತವಾದ ಶಾಂತಿ, ಇತರರಿಗಲ್ಲ."

ಶಾಶ್ವತವಾದ ಶಾಂತಿಯನ್ನು ಹೇಗೆ ಪಡೆಯುವುದು ಎಂಬುದನ್ನು ಉಪನಿಷತ್ತು ಬೋಧಿಸುವುದು. ನಮಗೆ ಆ ಶಾಶ್ವತ ಶಾಂತಿ ಸಿಕ್ಕದೇ ಇರುವುದಕ್ಕೆ ಕಾರಣ ನಮ್ಮ ಮನಸ್ಸು ಮತ್ತು ಇಂದ್ರಿಯಗಳು ಬಹಿರ್ಮುಖವಾಗಿರುವುದರಿಂದ ನಮ್ಮ ಇಂದ್ರಿಯಗಳು ಯಾವಾಗಲೂ ರೂಪ ರಸ ಶಬ್ದ ಸ್ಪರ್ಶ ಗಂಧದ ಕಡೆ ಧಾವಿಸುತ್ತವೆ. ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಅದನ್ನು ಅಂತರ್ಮುಖ ಮಾಡಿದರೆ ಅದು ಪರಮಾತ್ಮನ ಸಮೀಪಕ್ಕೆ ಹೋಗುವುದು. ಹೀಗೆ ಅಂತರ್ಮುಖ ಮಾಡಬಲ್ಲ ಧೀರರು ಬಹಳ ವಿರಳ ಪ್ರಪಂಚದಲ್ಲಿ.

ಪರಬ್ರಹ್ಮನ ಸಾಕ್ಷಾತ್ಕಾರಕ್ಕೆ ಶ್ರವಣ ಮನನ ನಿಧಿಧ್ಯಾಸನ ಬೇಕೆಂದು ಯಾಜ್ಞವಲ್ಕ್ಯ ಮೈತ್ರೇಯಿಗೆ ಹೇಳುವನು. ಅವನನ್ನು ಮೊದಲು ಕೇಳಬೇಕು, ಅನಂತರ ಮನನಮಾಡ

ಬೇಕು, ಅನಂತರ ಧ್ಯಾನವಮಾಡಬೇಕು. ಶ್ರವಣಮಾಡ ಬೇಕಾದರೆ ಪರಮಗುರುವಿನ ಬಾಯಿಂದ ಅದನ್ನು ಕೇಳಬೇಕು. ಸುಮ್ಮನೆ ಕೇಳಿದರೆ ಪ್ರಯೋಜನವಿಲ್ಲ, ನಮ್ಮ ಮನಸ್ಸು ಕೇಳು ವುದಕ್ಕೆ ಅಣಿಯಾಗಿರಬೇಕು. ಆಗಲೇ ಕೇಳುವುದರಿಂದ ಪ್ರಯೋಜನ ಪಡಿಯಬಹುದು. ಬೆಂಕಿಯ ಕಡ್ಡಿಯನ್ನು ಗೀರಿದರೆ ಹತ್ತಿಕೊಳ್ಳುವುದು. ಆದರೆ ಕಡ್ಡಿ ನೆನೆದುಹೋಗಿದ್ದರೆ ಎಷ್ಟೇ ಗೀರಿದರೂ ಕಡಿಯು ಮುರಿದುಹೋಗುವುದೇ ವಿನಾ ಅದು ಹತ್ತಿಕೊಳ್ಳಲಾರದು. ಅದರಂತೆಯೇ ಶ್ರವಣಕ್ಕೆ ಮುಂಚೆ ನಮ್ಮ ಮನಸ್ಸನ್ನು ಹದಮಾಡಿಕೊಳ್ಳಬೇಕು. ಉಪನಿಷತ್ತಿನ ವಿಷಯ ಗಳನ್ನು ತಿಳಿದುಕೊಳ್ಳಬೇಕಾದರೆ ಅದಕ್ಕೆ ಸಾಧನ ಚತುಷ್ಟಯ ವನ್ನು ಅಭ್ಯಾಸಮಾಡಬೇಕು. ಆಗ ಮಾತ್ರ ನಾವು ಕೇಳಿ ತಿಳಿದುಕೊಳ್ಳಬಹುದು. ಅವೇ ನಿತ್ಯ ಅನಿತ್ಯವಸ್ತು ವಿವೇಕ, ಇಹ ಅಮುತ್ರ ಫಲಭೋಗವಿರಾಗ, ಶಮ ದಮ ತಿತಿಕ್ಷೆ ಉಪ ರತಿ ಸಮಾಧಾನ ಮತ್ತು ಶ್ರದ್ಧೆ, ಅನಂತರ ಮುಮುಕ್ಷುತ್ವ, ಇವು ಅತ್ಯಂತ ಆವಶ್ಯಕ. ಅನೇಕವೇಳೆ ನಮಗೆ ಒಂದು ವಿಷಯವನ್ನು ಕಲಿತುಕೊಳ್ಳಬೇಕೆಂಬ ಕುತೂಹಲವೇನೋ ಇರಬಹುದು. ಆದರೆ ತಕ್ಕ ಸಿದ್ಧತೆಯನ್ನು ಪಡೆಯಲು ನಾವು ಸಿದ್ಧರಾಗಿಲ್ಲ. ಹಾಗೆ ಸಿದ್ಧರಾಗಿಲ್ಲದೆ ತಿಳಿಯಲು ಯತ್ನಿಸಿದರೆ, ನಾವು ತಪ್ಪುತಿಳಿದುಕೊಳ್ಳುವ ಸಂಭವವೇ ಹೆಚ್ಚು. ಗಹನ ತತ್ತ್ವವನ್ನು ತಪ್ಪುತಿಳಿದುಕೊಳ್ಳುವುದಕ್ಕಿಂತ ತಿಳಿಯದೇ ಇರು ವುದೇ ಮೇಲು. ಆದಕ್ಕಾಗಿ ಎಲ್ಲರಿಗೂ ಸಾಧನ ಚತುಷ್ಟಯದ ಶಿಕ್ಷಣವನ್ನು ಒತ್ತಿ ಹೇಳುವರು. ಮುಂಚೆ ನಮ್ಮಲ್ಲಿ ನಿತ್ಯ ಅನಿತ್ಯ ವಸ್ತುವಿವೇಕ ಇರಬೇಕು. ಈ ಪ್ರಪಂಚದಲ್ಲಿ ನಿಜವಾಗಿ ಸತ್ಯ ಯಾವುದು, ತೋರಿಕೆ ಯಾವುದು ಅದನ್ನು ವಿಮರ್ಶಿಸುವ

ದೃಷ್ಟಿ ಅತ್ಯಂತ ಅವಶ್ಯಕ. ಅನೇಕ ವೇಳೆ ನಾವು ತೋರಿಕೆಯನ್ನು ಸತ್ಯವೆಂದು ಭಾವಿಸುವೆವು, ನಿಜವಾದ ಸತ್ಯವನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಕಠೋಪನಿಷತ್ತಿನಲ್ಲಿ ಯಮ ನಚಿಕೇತನ ಮುಂದೆ ಸಕಲ ಭೋಗವಸ್ತುಗಳನ್ನೂ ಇಡುವನು. ಮರ್ತ್ಯಲೋಕದಲ್ಲಿ ಯಾವ ಯಾವ ಕಾಮಗಳು ದುರ್ಲಭವೋ ಅವನ್ನೆಲ್ಲ ಕೇಳು ಎನ್ನುವನು. ನಚಿಕೇತ ಒಂದು ಕ್ಷಣದಲ್ಲಿ "ಇವೆಲ್ಲ ಕ್ಷಣಿಕ, ಮನಸ್ಸಿನ ತೇಜಸ್ಸನ್ನು ಕ್ಷೀಣಿಸುವುವು. ಇವುಗಳೆಲ್ಲ ನಿನಗೇ ಇರಲಿ" ಎನ್ನುವನು. ಭೋಗದೃಷ್ಟಿ ನಮ್ಮಲ್ಲಿ ನಾಶವಾಗದೆ ಸತ್ಯವನ್ನು ತಿಳಿಯಬೇಕೆಂಬ ಹಂಬಲ ಉದಿಸದು. ಎರಡನೆಯದೇ ಈ ಪ್ರಪಂಚದಲ್ಲಿ ಸತ್ತಮೇಲೆ ಬರುವ ಫಲ ಮತ್ತು ಭೋಗದ ವಿಷಯದಲ್ಲಿ ವಿರಾಗ. ಇಹಲೋಕದಲ್ಲಿ ನಾವು ಮಾಡುವ ಕರ್ಮಗಳಿಗೆ ಬದ್ಧರಾಗಿ ಅವುಗಳಿಂದ ಬರುವ ಕೀರ್ತಿ, ಯಶಸ್ಸು, ಭೋಗ ಮುಂತಾದುವುಗಳಿಗೆ ಕೈ ಒಡ್ಡಿ ದಾಸರಾಗುವೆವು. ಇಲ್ಲಿ ಅನುಭವಿಸುವುದು ಸಾಲದೆ ಬೇರೆ ಲೋಕವಿದ್ದರೆ ಅಲ್ಲಿಯೂ ಅದು ನಮಗೆ ದೊರೆಯಬೇಕಾದರೆ ಯಾವ ವ್ರತ ಹೋಮಾದಿಗಳನ್ನು ಮಾಡಬೇಕೆಂದು ಅರಿತು ಅದನ್ನು ಮಾಡುವೆವು. ಇವೆಲ್ಲ ನಮ್ಮನ್ನು ಸಂಸಾರಚಕ್ರದಲ್ಲಿ ಸುತ್ತುವಂತೆ ಮಾಡುವುವೇ ಹೊರತು ನಮ್ಮನ್ನು ಮುಕ್ತರನ್ನಾಗಿ ಮಾಡುವುದಿಲ್ಲ. ಈ ಆಸೆಯ ಮೊಳಕೆ ನಮ್ಮಲ್ಲಿ ನಾಶವಾಗಿರಬೇಕು. ಶಮ ಎಂದರೆ ಪ್ರಪಂಚದ ಕಡೆ ಧಾವಿಸುವ ಮನಸ್ಸನ್ನು ನಿಗ್ರಹಿಸಬೇಕು. ಆಗ ಮಾತ್ರ ನಿಗ್ರಹಿಸಿದ ಶಕ್ತಿಯನ್ನು ಉತ್ತಮ ಕ್ಷೇತ್ರದಲ್ಲಿ ಹರಿಸಬಹುದು. ದಮ ಎಂದರೆ ವಿಷಯ ವಸ್ತುಗಳ ಕಡೆ ಹೋಗುವ ಇಂದ್ರಿಯಗಳನ್ನು ತಡೆಗಟ್ಟಬೇಕು. ತಿತಿಕ್ಷೆ ಎಂದರೆ ಸಹಿಷ್ಣುತೆಯನ್ನು ಜೀವನದಲ್ಲಿ ಅಭ್ಯಾಸಮಾಡಬೇಕು.

ಮುಯ್ಯಿಗೆ ಮುಯ್ಯಿ ತೀರಿಸುವ ಹಂಬಲವಿದ್ದರೆ ಮನಸ್ಸಿನಲ್ಲಿ ದೊಡ್ಡ ಆಂದೋಳನ ಏಳುವುದು. ಎಷ್ಟೋ ಮಾನಸಿಕ ಶಕ್ತಿ ವ್ರಯವಾಗುವುದು. ಧ್ಯಾನಕ್ಕೆ ಕೂತರು ಧ್ಯಾನವಾಗಲಾರದು ಇಂತಹ ಸ್ವಭಾವ ಇರುವವನಿಗೆ. ಉಪರತಿ ಎಂದರೆ ಮನಸ್ಸನ್ನು ವಿಷಯವಸ್ತುಗಳ ಸಂಸ್ಕಾರದಿಂದ ಸೆಳೆಯುವುದು. ಚಿತ್ತ ಸಮಾಧಾನವಾಗಿರಬೇಕು. ಆಗಲೆ ಮನಸ್ಸನ್ನು ಏಕಾಗ್ರ ಮಾಡಲು ಸಾಧ್ಯ, ವಸ್ತುವಿನ ನೈಜಸ್ಥಿತಿಯನ್ನು ತಿಳಿಯಲು ಸಾಧ್ಯ. ಮನಸ್ಸು ಉದ್ವೇಗಕ್ಕೆ ಬಲಿಯಾದಾಗ ಯಥಾರ್ಥ ಜ್ಞಾನವನ್ನು ಅರಿಯಬಲ್ಲ ತನ್ನ ಸ್ವಭಾವವನ್ನು ಕಳೆದುಕೊಳ್ಳು ವುದು. ಶ್ರದ್ಧೆ ಎಂದರೆ ಗುರುವಾಕ್ಯದಲ್ಲಿ ಮತ್ತು ಆಧ್ಯಾತ್ಮಿಕ ವಿಷಯಗಳನ್ನು ಹೇಳುವ ಶಾಸ್ತ್ರದಲ್ಲಿ. ಕೊನೆಯದೇ ಮುಮುಕ್ಷುತ್ವ, ತಾನು ಮುಕ್ತನಾಗಬೇಕು ಎಂಬ ಆಸೆ ತೀವ್ರವಾಗಿರ ಬೇಕು, ಪ್ರಪಂಚದ ಮಾಯೆಯಿಂದ ತಪ್ಪಿಸಿಕೊಂಡು ಹೋಗಿ ಪರಬ್ರಹ್ಮನಲ್ಲಿ ಬಾಳುವುದಕ್ಕೆ. ಎಂದು ಈ ಹಂಬಲ ಉತ್ಕಟ ವಾಗುವುದೊ ಆಗ ಅವನಿಗೆ ಯಾವುವು ಅತ್ಯಂತ ಆವಶ್ಯಕವೊ ಅವೆಲ್ಲ ತಮಗೆ ತಾವೇ ಒದಗಿಬರುವುವು. ಆಧ್ಯಾತ್ಮಿಕ ಜೀವನದ ಗಾಢ ನಿಯಮ ಇದು.

ನಾವು ಅಣಿಯಾದ ಮೇಲೆ ಯೋಗ್ಯ ಗುರುವಿನ ಹತ್ತಿರ ಹೋಗಿ ಅವನು ಹೇಳುವುದನ್ನು ಕೇಳಬೇಕು, ಇಲ್ಲಿ ಓದಬೇಕು ಎನ್ನುವುದಿಲ್ಲ, ಕೇಳಬೇಕು ಎಂದು ಹೇಳುವರು. ಓದುವುದ ಕ್ಕಿಂತ ಈ ಜೀವನದಲ್ಲಿ ಅನುಭವಸ್ಥರಿಂದ ಕೇಳುವುದು ಹೆಚ್ಚು ಪ್ರಯೋಜನಕಾರಿ. ಅಂತಹ ಮನುಷ್ಯನು ಆಡುವ ಮಾತಿನ ಹಿಂದೆ ಅವನ ಅನುಭವದ ಶಕ್ತಿ ಇರುವುದು. ಕೇಳುವವನ ಮೇಲೆ ಇದು ಪರಿಣಾಮಕಾರಿಯಾಗುವುದು, ನಾವೇ ಓದಿದಾಗ

ಅರ್ಥವಾಗದಿರುವುದು, ಮಹಾತ್ಮನ ಬಾಯಿಂದ ಕೇಳಿದಾಗ ಅರ್ಥವಾಗುವುದು.

ಕೇಳಿದ ಮೇಲೆ ಅದನ್ನು ನಾವು ಮನನಮಾಡಬೇಕು. ಕೇಳುವುದು ಕಲಿತುಕೊಳ್ಳುವುದಕ್ಕೆ ಪ್ರಾರಂಭ ಮಾತ್ರ. ಅದು ಚೆನ್ನಾಗಿ ನಮ್ಮ ಮನಸ್ಸಿನಲ್ಲಿ ನೆಲೆಸಬೇಕು. ಅದನ್ನೇ ಕುರಿತು ನಾವು ಪದೇ ಪದೇ ಮನನಮಾಡುತ್ತಿರಬೇಕು. ಆಗಲೆ ವಿಷಯವನ್ನು ಆಳವಾಗಿ ವಿವರವಾಗಿ ತಿಳಿಯಲು ಸಾಧ್ಯವಾಗುವುದು. ಹಸು ಮುಂಚೆ ಹುಲ್ಲನ್ನು ಮೇಯುವುದು. ಅನಂತರ ಒಂದು ಕಡೆ ಮಲಗಿ ಮೆಲುಕು ಹಾಕುವುದು. ಆಗಲೇ ಅದು ಚೆನ್ನಾಗಿ ಜೀರ್ಣವಾಗಿ ರಕ್ತಗತವಾಗಬೇಕಾದರೆ. ಹಾಗೆಯೇ ಮನನ.

ಅನಂತರದ ಮೆಟ್ಟಿಲೇ ನಿದಿಧ್ಯಾಸನ ಅಥವಾ ಧ್ಯಾನ. ಉಪನಿಷತ್ತಿನಲ್ಲಿ ಯಾವ ದೇವದೇವಿಯರನ್ನು ಕುರಿತು ಉಪಾಸನೆ ಮಾಡು ಎಂದು ಹೇಳುವುದಿಲ್ಲ. ಅಲ್ಲಿ ಪ್ರಣವೋಪಾಸನೆಯೇ ಶ್ರೇಷ್ಠ ಉಪಾಸನೆ. ಇದನ್ನೇ ಶಬ್ದಬ್ರಹ್ಮ ಎನ್ನುವರು. ನಾವು ಪರಬ್ರಹ್ಮನ ಕಡೆ ಹೋಗಬೇಕಾದರೆ ಪ್ರಣವೋಪಾಸನೆ ಒಂದು ಏಣಿಯಂತೆ. ಈ ಉಪಾಸನೆ ನಮಗೆ ಸಗುಣ ನಿರ್ಗುಣಗಳೆರಡನ್ನೂ ಕೊಡಬಲ್ಲದು. ಈ ಉಪಾಸನೆಯನ್ನೆ ಯಮ ನಚಿಕೇತನಿಗೆ ಕಠೋಪನಿಷತ್ತಿನಲ್ಲಿ ಹೇಳಿದ್ದು. "ಎಲ್ಲ ವೇದಗಳು ಯಾವ ಪದವನ್ನು ಪ್ರತಿಪಾದಿಸುತ್ತವೆಯೋ, ಎಲ್ಲ ತಪಸ್ಸು ಯಾವುದನ್ನು ಹೇಳುತ್ತವೆಯೊ. ಯಾವುದನ್ನು ಇಚ್ಛಿಸುತ್ತ ಬ್ರಹ್ಮಚರ್ಯವನ್ನು ಆಚರಿಸುತ್ತಾರೆಯೊ, ಆ ಪದವನ್ನು ಸಂಗ್ರಹವಾಗಿ ಹೇಳುತ್ತೇನೆ. ಇದು ಓಂ ಎಂಬುದು. ಈ ಅಕ್ಷರವೇ ಬ್ರಹ್ಮ, ಈ ಅಕ್ಷರವೇ ಪರ, ಈ ಅಕ್ಷರವನ್ನು ತಿಳಿದುಕೊಂಡು ಯಾವನು ಯಾವುದನ್ನು

ಬಯಸುತ್ತಾನೆಯೊ ಅವನಿಗೆ ಅದೇ ಆಗುವುದು. ಈ ಆಧಾರ ಪರವಾದದ್ದು. ಈ ಆಧಾರವನ್ನು ತಿಳಿದುಕೊಂಡು ಬ್ರಹ್ಮ ಲೋಕದಲ್ಲಿ ಮಹಿಮೆಯನ್ನು ಪಡೆಯುತ್ತಾನೆ." ಶ್ವೇತಾಶ್ವತರ ಉಪನಿಷತ್ತಿನಲ್ಲಿ ಆ ಉಪಾಸನೆಯನ್ನು ಹೇಗೆ ಮಾಡಬೇಕು ಎಂಬುದನ್ನು ವಿವರಿಸುವರು: "ತನ್ನ ಸ್ವಂತ ದೇಹವನ್ನು ಒಂದು ಅರುಣಿಯನ್ನಾಗಿ ಮಾಡಿ, ಪ್ರಣವವನ್ನು ಉತ್ತರ ಅರುಣಿಯನ್ನಾಗಿ ಮಾಡಿ, ಧ್ಯಾನ ಅಭ್ಯಾಸದಿಂದ ಮಥನಮಾಡಿ ಅಡಗಿಕೊಂಡಂತೆ ಇರುವ ದೇವನನ್ನು ನೋಡಬೇಕು.'' ಆಗ ಮಾತ್ರ ಮುಂಡಕೋಪನಿಷತ್ತು ಹೇಳುವಂತೆ "ಇವನ ಹೃದಯ ಗ್ರಂಥಿ ನಾಶವಾಗುವುದು, ಸರ್ವಸಂಶಯಗಳೂ ವಿಚ್ಛೇದ ವಾಗುವುವು. ಕರ್ಮಗಳು ಕ್ಷೀಣವಾಗುವುವು.'' ಆಗಲೆ ನಮಗೆ ಮುಂದೆ ಬರುವ ಮುಂಡಕೋಪನಿಷತ್ತಿನ ಅನುಭವ ಆಗುವುದು: "ಅಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಈ ಮಿಂಚುಗಳು ಪ್ರಕಾಶಿಸುವುದಿಲ್ಲ. ಈ ಅಗ್ನಿಯು ಪ್ರಕಾಶಿಸುವುದಿಲ್ಲ. ಪ್ರಕಾಶಿಸುವ ಅವನನ್ನು ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವುದು. ಅವನ ಪ್ರಕಾಶ ದಿಂದಲೇ ಇವೆಲ್ಲವು ಪ್ರಕಾಶಿಸುತ್ತಿರುವುದು. ಮುಂದಿರುವ ಇದು ಅಮೃತವಾದ ಬ್ರಹ್ಮವೇ, ಹಿಂದೆಯೂ ದಕ್ಷಿಣಕ್ಕೂ ಉತ್ತರಕ್ಕೂ ಇರುವುದು ಬ್ರಹ್ಮವೇ, ಕೆಳಗೂ ಮೇಲೂ ಪ್ರಸರಿಸಿರುವುದು ಬ್ರಹ್ಮವೇ. ಈ ಜಗತ್ತೆಲ್ಲವೂ ಶ್ರೇಷ್ಠತಮವಾದ ಬ್ರಹ್ಮವೇ.... ಯಾವನು ಆ ಪರಬ್ರಹ್ಮವನ್ನು ಅರಿತುಕೊಳ್ಳುವನೋ ಅವನು ಬ್ರಹ್ಮವೇ ಆಗುವನು."

೪. ಬೋಧನೆಯ ವೈಶಿಷ್ಟ್ಯ

ಉಪನಿಷತ್ತಿನ ಗಹನ ತತ್ತ್ವಗಳು ಅನುಷ್ಠಾನ ಪ್ರಧಾನ

ವಾದುವು. ಅವು ಮೊದಲು ಅನುಷ್ಠಾನವಾಗಿ ಅನಂತರ ಒಂದು ಸಿದ್ಧಾಂತವಾದವು. ಅನೇಕ ವೇಳೆ ನಾವು ವೇದಾಂತವನ್ನು ಅನುಷ್ಠಾನಕ್ಕೆ ತರಲು ಅಸಾಧ್ಯ. ಇದು ಪ್ರಪಂಚದ ಹವ್ಯಾಸ ವಿಲ್ಲದವರಿಗೆ ಸರಿ, ಜಗದ ಗಡಿಬಿಡಿಯಲ್ಲಿರುವವರಿಗೆ ಅಸಾಧ್ಯ ಎಂದು ಟೀಕಿಸುವೆವು. ಆದರೆ ಉಪನಿಷತ್ತು ಮುಂಚೆ ಹುಟ್ಟಿದ್ದು ಜಗದ ಚಟುವಟಿಕೆಯ ಸುಳಿಯಲ್ಲಿ ಎಲ್ಲರಿಗಿಂತ ಹೆಚ್ಚು ಸಿಕ್ಕಿದ್ದವ ರಿಂದ ಎಂದರೆ ನಮಗೆ ಆಶ್ಚರ್ಯವಾಗುವುದು. ಶ್ವೇತಕೇತು ಮತ್ತು ಅವನ ತಂದೆ ಇಬ್ಬರೂ ಬ್ರಹ್ಮನಿಷ್ಠರಾಗಿದ್ದರು. ಅವರಿಬ್ಬರೂ ಪ್ರವಹಣ ಜೈವಲಿ ಎಂಬ ಪಾಂಚಾಲ ರಾಜನ ಬಳಿಗೆ ಬಂದು ಅವನನ್ನು ಪ್ರಶ್ನಿಸಿದರು. ಆಗ ಆ ರಾಜನು "ಇದುವರೆಗೆ ಈ ವಿದ್ಯೆ ಬ್ರಾಹ್ಮಣರಿಗೆ ಗೊತ್ತಿರಲಿಲ್ಲ. ಹಿಂದೆ ಎಲ್ಲ ಲೋಕ ಗಳಲ್ಲಿಯೂ ಈ ವಿದ್ಯೆಯ ಅನುಶಾಸನವು ಕ್ಷತ್ರಿಯರಿಗೇ ಸೇರಿತ್ತು" ಎಂದು ಅವರಿಗೆ ಉಪದೇಶಮಾಡಿದನೆಂದು ಛಾಂದೋಗ್ಯ ಉಪನಿಷತ್ತು ಹೇಳುವುದು. ಆಗಿನ ಕಾಲದಲ್ಲಿ ರಾಜ ನಿರಂಕುಶ ಪ್ರಭು. ರಾಜ್ಯವನ್ನು ಆಳಬೇಕಾಗಿತ್ತು, ನ್ಯಾಯಾನ್ಯಾಯಗಳನ್ನು ವಿಚಾರಿಸಬೇಕಾಗಿತ್ತು, ಯುದ್ಧರಂಗ ದಲ್ಲಿ ಸೈನ್ಯದ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳಬೇಕಾ ಗಿತ್ತು. ಇಂತಹ ರಾಜರಿಗೆ ಉಪನಿಷತ್ತಿನಲ್ಲಿ ಬರುವ ಸತ್ಯವನ್ನು ಚಿಂತಿಸಲು ಅವಕಾಶವಿತ್ತು, ಅದನ್ನು ಅನುದಿನ ಜೀವನದಲ್ಲಿ ಬಳಕೆಗೆ ತರಲು ಸಾಧ್ಯವಿತ್ತು ಎಂದು ನೋಡುವೆವು. ಅಂತಹ ರಾಜನ ಜೀವನದೊಂದಿಗೆ ಹೋಲಿಸಿ ನೋಡಿದರೆ ನಮ್ಮದು ವಿರಾಮ ಜೀವನ. ಯಾವುದು ಅವನಿಗೆ ಸಾಧ್ಯವಾಯಿತೊ ಅದು ನಮಗೂ ಸಾಧ್ಯವಾಗಬೇಕು. ಅಸಾಧ್ಯವನ್ನು ಉಪ ನಿಷತ್ತು ಬೋಧಿಸುವುದಿಲ್ಲ. ಜಗದ ಹವ್ಯಾಸವನ್ನು ಬಿಟ್ಟವರಿಗೆ

ಮೀಸಲಲ್ಲ ವೇದಾಂತ. ನಿತ್ಯಜೀವನದಲ್ಲಿ ಎಲ್ಲರಿಗೂ ಸಹಾಯಕ್ಕೆ ಬರಬೇಕು ಒಂದು ತತ್ತ್ವ ಪ್ರಯೋಜನಕ್ಕೆ ಬರಬೇಕಾದರೆ. ಇಂತಹ ಸಾಧ್ಯತೆ ಮತ್ತು ಪ್ರಯೋಜನವನ್ನು ಅವರ ಸಂದೇಶದಲ್ಲಿ ನೋಡುತ್ತೇವೆ

ಮಾನವಜೀವನವನ್ನು ನಿಕೃಷ್ಟವಾಗಿ ಎಣಿಸುವುದಿಲ್ಲ ಉಪನಿಷತ್ತು. ಎಲ್ಲಿಯೂ ಅವನನ್ನು ದೂರುವುದಿಲ್ಲ. ಮಾನವ ಎಂದರೆ ಸೃಷ್ಟಿಯ ವಿಕಾಸದ ಏಣಿಯಲ್ಲಿ ತುತ್ತುದಿಯಲ್ಲಿ ಇರುವವನು. "ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ" ಎಂದು ಶ್ವೇತಾಶ್ವತರ ಉಪನಿಷತ್ತು ಮಾನವನನ್ನು ಸಂಬೋಧಿಸುವುದು. ಮಾನವನನ್ನು ಪಾಪಿಗಳೆಂದು ಕರೆಯುವುದೇ ಈಶ್ವರ ನಿಂದೆ. ನಾವು ಬ್ರಹ್ಮನಿಂದ ಬಂದವರು, ಅವನೆಡೆಗೆ ಹೊರಟವರು. ಸದ್ಯಕ್ಕೆ ಇರುವಾಗಲೂ ಅವನಲ್ಲೆ ಇರುವೆವು. ಆದರೆ ತತ್ಕಾಲಕ್ಕೆ ಮರೆತಿರುವೆವು. ಆ ಸ್ಥಿತಿಯನ್ನು ನಾವು ಸಾಧನೆಯಿಂದ ಜ್ಞಾಪಿಸಿಕೊಳ್ಳಬೇಕಾಗಿದೆ. ಆಶಿಷ್ಠ ದೃಢಿಷ್ಠ ಬಲಿಷ್ಠರಾಗಬೇಕೆಂದು ಉಪನಿಷತ್ತು ಹೇಳುವುದು. ಅಂತೂ ಹೇಗೋ ಕಾಲಯಾಪನೆ ಮಾಡುವುದಲ್ಲ. ಧೀರರಾಗಿ ಬಾಳಬೇಕು, ಸಾಹಸದಿಂದ ಬಾಳಬೇಕು, ಜೀವನವನ್ನು ಒಂದು ವರವಂತೆ ಸ್ವೀಕರಿಸಬೇಕು. ಇದೊಂದು ಶಾಪ ಎಂದು ಗೋಳಿಟ್ಟು ಒರಲುವ ಅಳುಮೋರೆಯ ಧರ್ಮವನ್ನು ಉಪನಿಷತ್ತು ಬೋಧಿಸುವುದಿಲ್ಲ.

ಪ್ರಪಂಚವನ್ನು ಅನುಭವಿಸಬೇಡಿ ಎನ್ನುವುದಿಲ್ಲ ಉಪನಿಷತ್ತು. ಅನುಭವಿಸುವ ರಹಸ್ಯವನ್ನು ತಿಳಿದುಕೊಂಡು ಅನುಭವಿಸಿ ಎನ್ನುವುದು. ನಮಗೆಲ್ಲ ಅನುಭವಿಸಲು ಆಸೆ. ರೂಪ ರಸ ಶಬ್ದ ಗಂಧಗಳು ನಮ್ಮನ್ನು ಕರೆಯುತ್ತಿವೆ ರಹಸ್ಯವನ್ನು

ಕಲಿಯಲು ಸಾಧ್ಯ ಇಲ್ಲ. ತಕ್ಷಣ ಅದರ ಕರೆಗೆ ಗಮನಕೊಟ್ಟು ಬೀಳುವೆವು. ಈಜು ಬರದವನು ನೀರಿಗೆ ಬಿದ್ದಂತೆ ಆಗುವುದು. ನೊಣ ಹಲಸಿನ ಹಣ್ಣನ್ನು ತಿನ್ನಲು ಹೋಗಿ ಅಂಟಿನಮೇಲೆ ಕುಳಿತಂತಾಗುವುದು. ಅನಂತರ ದುಃಖ ಪಡುವೆವು. ಈ ಪ್ರಪಂಚದಲ್ಲಿ ಏನಿದೆಯೊ ಅದನ್ನೆಲ್ಲ ಭಗವಂತನಿಂದ ತುಂಬಿ ಎಂದು ಈಶಾವಾಸ್ಯ ಉಪನಿಷತ್ತು ಹೇಳುವುದು. ದೇವರನ್ನು ಜ್ಞಾಪಕದಲ್ಲಿಟ್ಟುಕೊಂಡು, ಇದೆಲ್ಲ ಅವನದೆಂಬ ಭಾವನೆಯಿಂದ ಪ್ರಪಂಚವನ್ನು ಆಸ್ವಾದಿಸುವ. ಆಗ ದುಃಖ ದುರಂತಗಳಿಗೆ ಕಾರಣವಾದವು ನಮ್ಮ ಜೀವನವನ್ನು ಪ್ರವೇಶಿಸುವುದಿಲ್ಲ. ಎಂದು ಈಶನನ್ನು ಮರೆಯುವೆವೊ ಅಮೃತವು ವಿಷವಾಗುವುದು, ಎಂದು ಮರೆಯುವುದಿಲ್ಲವೊ ವಿಷವು ಅಮೃತವಾಗುವುದು. ಜೀವನದಲ್ಲಿ ಬಾಳುವುದೊಂದು ದೊಡ್ಡ ಕಲೆ. ನಾವು ಶಾಂತಿಯನ್ನು ಅನುಭವಿಸಿ, ಸುತ್ತಲೂ ಇರುವವರಿಗೆ ಶಾಂತಿ ನೀಡುವುದೇ ಜೀವನದ ಮುಖ್ಯ ಉದ್ದೇಶ. ಇದಕ್ಕೆ ನಾವು ಅಣಿಯಾಗಬೇಕು, ತರಬೇತು ತೆಗೆದುಕೊಳ್ಳಬೇಕು. ಸುಮ್ಮನೆ ಆತುರದಿಂದ ಧಾವಿಸಿದರೆ ಇಲ್ಲದ ಕಷ್ಟ ನಷ್ಟಗಳಿಗೆ ಒಳಗಾಗುವೆವು. ಜೀವನವನ್ನು ಅನಂತರ ಹಳಿಯುವೆವು.

ಈಶಾವಾಸ್ಯ ಉಪನಿಷತ್ತು ಬೋಧಿಸುವ ಮತ್ತೊಂದು ಅಮರ ಸತ್ಯವೇ "ತ್ಯಾಗದಿಂದ ಅನುಭವಿಸು" ಎಂಬುದು. ಸಂಗ್ರಹಿಸುವುದರಲ್ಲಿ ಆನಂದವಿದೆ. ಅದನ್ನು ಮತ್ತೊಬ್ಬರಿಗೆ ನೀಡುವುದರಲ್ಲಿ ಅದಕ್ಕಿಂತ ಮಿಗಿಲಾದ ಆನಂದವಿದೆ. ಈಶನು ನಮಗೆ ಏನನ್ನು ಕೊಟ್ಟಿರುವನೊ ಅದನ್ನು ಅವನ ಮಕ್ಕಳಿಗೆ ಕೊಟ್ಟು ಅನುಭವಿಸಬೇಕು. ನಾವು ಏನನ್ನು ಕೊಡುವೆವೊ ಅದು ನಮ್ಮ ಉದ್ಧಾರಕ್ಕೆ ಕಾದು ನಿಂತಿರುವುದು. ನಾವು

ಕೊಟ್ಟದ್ದು ಹತ್ತಾಗಿ ನೂರಾಗಿ ಸಾವಿರವಾಗಿ ನಮ್ಮೆಡೆಗೆ ಬರುವುದು. ಸಂಗ್ರಹದಿಂದ ಬಂದ ಆನಂದ ಕ್ಷೀಣವಾಗುವುದು. ಎಂದು ನಾವು ಅದನ್ನು ಇತರರಿಗೆ ಕೊಡುವೆವೊ ಅದು ವೃದ್ಧಿಯಾಗುವುದು.

"ಈ ಪ್ರಪಂಚದಲ್ಲಿ ಶಾಸ್ತ್ರ ವಿಹಿತವಾದ ಕರ್ಮಗಳನ್ನು ಮಾಡುತ್ತಲೆ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು.'' ಏಕಾದರೊ ಪ್ರಪಂಚಕ್ಕೆ ಬಂದೆನೊ, ಎಷ್ಟು ಬೇಗ ಇಲ್ಲಿಂದ ಹೋದರೆ ಅಷ್ಟು ಮೇಲು ಎಂಬ ಹೇಡಿಯ ಸೂತ್ರವನ್ನಲ್ಲ ಉಪನಿಷತ್ತು ಹೇಳುವುದು. ನಾವು ಪ್ರಪಂಚಕ್ಕೆ ಬಂದಮೇಲೆ ಪೂರ್ಣ ಆಯುಸ್ಸನ್ನು ಬಾಳಬೇಕು; ಓಡಿಹೋಗುವುದಲ್ಲ. ಬಾಳುತ್ತಿರುವಾಗ ಜೀವನ ಧಾರ್ಮಿಕ ಕರ್ಮಗಳಿಂದ ತುಂಬಿ ತುಳುಕಾಡುತ್ತಿರಬೇಕು. ಜೀವನ ಸ್ವಾರ್ಥವಾಗಿ ಬಾಳುವುದಲ್ಲ. ಸೋಮಾರಿಯಾಗಿ ಬಾಳುವುದಲ್ಲ. ದೇವರಪೀಠದ ಬಳಿ ಉರಿಯುತ್ತಿರುವ ಗಂಧವಕಡ್ಡಿ ಕ್ಷಣ ಕ್ಷಣಕ್ಕೂ ಕಡಿಮೆಯಾಗುತ್ತಿದ್ದರೂ ತನ್ನ ಸುವಾಸನೆಯಿಂದ ವಾತಾವರಣವನ್ನೆಲ್ಲಾ ತುಂಬುವಂತೆ ಪ್ರೀತಿ ಮತ್ತು ಸೇವೆಯ ಪರಿಮಳದಿಂದ ತುಂಬಿ ಬಾಳು ಮಾಯವಾಗಬೇಕು ಎಂಬುದನ್ನು ನಾವು ನೋಡುವೆವು.

ಮುಕ್ತಿ ಎಂಬುದು ಬ್ರಾಹ್ಮೀಸ್ಥಿತಿ. ಸಾವಿರುವಾಗ ಅದನ್ನು ಅನುಭವಿಸಬೇಕು. ಈಗಲ್ಲದೆ ಕಾಲವಾದಮೇಲೆ ಏನೋ ಸಿಕ್ಕಬಹುದಾದ ಲೋಕವನ್ನೊ ಸ್ಥಿತಿಯನ್ನೊ ಉಪನಿಷತ್ತು ಹೇಳುವುದಿಲ್ಲ. ಈಗ ಇಲ್ಲದುದು ಅನಂತರ ಬರಲಾರದು ಈಗ ಅದು ಇದ್ದರೆ ಅದು ಸತ್ಯ, ಇಲ್ಲದೆ ಇದ್ದರೆ ಅದನ್ನು ಸ್ವೀಕರಿಸಬೇಕಾಗಿಲ್ಲ. ಅಂತೆಕಂತೆಯ ಪುರಾಣದ ಮೇಲೆ ನಿಂತಿಲ್ಲ, ವರ್ತಮಾನದ ಅನುಭವದ ಆಧಾರದಮೇಲೆ ನಿಂತಿದೆ

ಉಪನಿಷತ್ತು. ಕೇನ ಉಪನಿಷತ್ತು ಹೀಗೆ ಹೇಳುವುದು: "ಇಲ್ಲಿಯೆ ಅರಿತುಕೊಂಡರೆ ಸತ್ಯ ಉಂಟು. ಇಲ್ಲಿ ಅರಿತು ಕೊಳ್ಳದಿದ್ದರೆ ದೊಡ್ಡ ವಿನಾಶವಾಗುತ್ತದೆ. ವಿವೇಕಿಗಳು ಸರ್ವ ಪ್ರಾಣಿಗಳಲ್ಲಿಯೂ ಆತ್ಮತತ್ತ್ವವನ್ನು ಅರಿತುಕೊಂಡು ಈ ಲೋಕದಿಂದ ಹೋಗಿ ಅಮೃತರಾಗುತ್ತಾರೆ. ಯಾವಾಗ ಬ್ರಹ್ಮ ಪ್ರತಿ ಬೋಧದಲ್ಲಿಯೂ ತಿಳಿಸಲ್ಪಡುವುದೊ ಆಗ ತಿಳಿದಂತಾಗುವುದು."

ಅಧ್ಯಯನವನ್ನು ಪೂರೈಸಿಕೊಂಡು ಹೋಗುವ ವೇಳೆ ಬ್ರಹ್ಮ ಚಾರಿಗಳಿಗೆ ಗುರು ಮಾಡುವ ಬೋಧನೆ ಇಂದಿಗೂ ಅನುಕರ ಣೀಯವಾಗಿದೆ! "ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಆಚಾರ್ಯನಿಗೆ ಇಷ್ಟ ವಾದ ಧನವನ್ನು ತಂದುಕೊಟ್ಟು ಸಂತತಿಯನ್ನು ವಿಚ್ಛಿನ್ನ ಗೊಳಿಸದಿರು. ಸತ್ಯದಿಂದ ಕದಲಕೂಡದು. ಧರ್ಮದಿಂದ ಕದಲಕೂಡದು. ಕುಶಲದಿಂದ ಕದಲಕೂಡದು. ಮಂಗಳ ಯುಕ್ತವಾದ ಧರ್ಮದಿಂದ ಕದಲಕೂಡದು. ಸ್ವಾಧ್ಯಾಯ ಪ್ರವಚನಗಳಿಂದ ಕದಲಕೂಡದು. ದೇವ ಪಿತೃ ಕಾರ್ಯದಿಂದ ಕದಲಕೂಡದು. ತಾಯಿಯೇ ನಿನಗೆ ದೇವರಾಗಲಿ. ತಂದೆಯೇ ನಿನಗೆ ದೇವರಾಗಲಿ. ಅತಿಥಿಯೇ ನಿನಗೆ ದೇವರಾಗಲಿ. ಯಾವ ಕರ್ಮಗಳು ಅನಿಂದಿತವೊ ಅವುಗಳನ್ನು ಸೇವಿಸಬೇಕು. ಉಳಿ ದವುಗಳನ್ನು ಸೇವಿಸಕೂಡದು. ನಮ್ಮಲ್ಲಿ ಯಾವ ಒಳ್ಳೆ ನಡತೆ ಗಳಿವೆಯೊ ಅವನ್ನೆ ಸೇವಿಸಬೇಕು. ಉಳಿದವುಗಳನ್ನು ಸೇವಿಸ ಕೂಡದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣ ರಿರುವರೊ ಅವರನ್ನು ಆಸನಾದಿ ಪೂರ್ವಕ ಆದರಿಸಬೇಕು."

"ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡ

ಬಾರದು. ತನ್ನ ಐಶ್ವರ್ಯಕ್ಕೆ ತಕ್ಕಂತೆ ಕೊಡಬೇಕು. ವಿನಯ ದಿಂದ ಕೊಡಬೇಕು, ಭಯದಿಂದ ಕೊಡಬೇಕು. ಮಿತ್ರಭಾವ ದಿಂದ ಕೊಡಬೇಕು."

"ಇನ್ನು ನಿನಗೆ ಶ್ರೌತ ಸ್ಮಾರ್ತ ಕರ್ಮಗಳನ್ನಾಗಲಿ, ವಿಚಾರ ವಿಷಯದಲ್ಲಾಗಲೀ ಸಂಶಯ ಉಂಟಾದರೆ, ಅಲ್ಲಿ ವಿಚಾರ ದಕ್ಷರೂ, ಕರ್ಮದಲ್ಲಿ ಸಮರ್ಥರೂ, ಅಕ್ರೂರ ಕಾಮಹತರೂ ಆದ ಬ್ರಾಹ್ಮಣರು ಹೇಗೆ ವರ್ತಿಸುವರೊ ಹಾಗೆ ನೀನು ವರ್ತಿಸು."

"ಇದು ವಿಧಿ, ಇದು ಉಪದೇಶ, ಇದು ವೇದರಹಸ್ಯ, ಇದು ಈಶ್ವರಾಜ್ಞೆ. ಹೀಗೆ ಉಪಾಸಿಸಬೇಕು. ಇದು ಅನುಷ್ಠೇಯ."

ಅಧ್ಯಯನ ಪ್ರವಚನಗಳನ್ನು ಬಿಡಕೂಡದು. ಇದೇ ತಪಸ್ಸು ಎಂದು ಸಾರುವುದು. ಜ್ಞಾನ ಪ್ರವಾಹವು ವೃದ್ಧಿಯಾಗುತ್ತಿರ ಬೇಕಾದರೆ, ಅಖಂಡವಾಗಿ ಹರಿದುಹೋಗುತ್ತಿರಬೇಕಾದರೆ, ಇವೆರಡೂ ಆವಶ್ಯಕ. ನಾವು ಅಧ್ಯಯನ ಮಾಡಬೇಕು, ವಿಷಯ ಗಳನ್ನು ತಿಳಿದುಕೊಳ್ಳಬೇಕು. ಇದಕ್ಕೆ ಒಂದು ಮಿತಿ ಇಲ್ಲ. ಶ್ರೀರಾಮಕೃಷ್ಣರು ನಾನು ಎಲ್ಲಿಯವರೆಗೆ ಇರುವೆನೊ ಅಲ್ಲಿಯ ವರೆಗೆ ಕಲಿಯುವೆನು ಎಂದು ಹೇಳುತ್ತಿದ್ದರು. ಅಂತೆಯೇ ನಾವು ವಿದ್ಯಾಭ್ಯಾಸವನ್ನು ಪೂರೈಸಿದಮೇಲೂ ಋಷಿ ಋಣ ವನ್ನು ತೀರಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಳಆಳವಾಗಿ ತಿಳಿಯಲು ಪ್ರಯತ್ನಿಸಬೇಕು. ಹೀಗೆ ತಿಳಿದು ಕೊಳ್ಳುತ್ತಿರುವಂತೆಯೇ ಅವನ್ನು ಇತರರಿಗೆ ವಿವರಿಸಬೇಕು. ಪಡೆಯುವುದು ಕೊಡುವುದಕ್ಕಾಗಿ. ಹಾಗೆ ಕೊಡುವಾಗ ಕೀರ್ತಿ ಯಶಸ್ಸಿನ ಆಸೆಯನ್ನು ಬದಿಗೊಡ್ಡಿ, ನಾನೊಂದು ಮಧ್ಯವರ್ತಿ,

ಮತ್ತೊಂದು ಹೃದಯಕ್ಕೆ ಜ್ಞಾನ ಪ್ರವೇಶಿಸುವುದಕ್ಕೆ ಎಂಬ ದೈನ್ಯಭಾವ ಇರಬೇಕು.

ಕಠೋಪನಿಷತ್ತಿನಲ್ಲಿ ಯಮ ನಚಿಕೇತನಿಗೆ ಹೇಳಿದ ಬೋಧನೆಯಿಂದಲೇ ಈ ಲೇಖನವನ್ನು ಅಂತ್ಯಗೊಳಿಸುತ್ತೇನೆ. "ಏಳಿ, ಎಚ್ಚರಗೊಳ್ಳಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ. ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ ಆ ಪಥವು ದುರ್ಗಮವೆಂದು ಜ್ಞಾನಿಗಳು ಹೇಳುತ್ತಾರೆ." ಜಾಗ್ರತರಾಗಬೇಕು, ನಾಮರೂಪಗಳ ಮಿಥ್ಯಾ ಮೋಹದ ನಿದ್ರೆಯಿಂದ ನಾವು ಕಣ್ಣು ಹೊಸಕಿಕೊಂಡು ಏಳಬೇಕು. ಜ್ಞಾನಿಗಳ ಬಳಿಗೆ ಹೋಗಿ ಬ್ರಾಹ್ಮೀಸ್ಥಿತಿಗೆ ಮಾರ್ಗವನ್ನು ಅರಿತುಕೊಳ್ಳಬೇಕು.

ಆ ಮಾರ್ಗ ಕತ್ತಿಯ ಅಲಗಿನಂತೆ ದಾಟಲು ಕಷ್ಟ. ಆದರೆ ಜೀವನದಲ್ಲಿ ಯಾವ ಸಾಹಸಕ್ಕೂ ಕೈಹಾಕದೆ ಇದ್ದರೂ ಬಾಳು ಮೃತ್ಯುವಿನ ಕೈವಶವಾಗುವುದು ಒಂದಲ್ಲ ಒಂದು ದಿನ. ಸಾವು ನಿಶ್ಚಯವಾಗಿರುವಾಗ ಸತ್ಯಕ್ಕೆ ಹೋರಾಡಿ, ಅದನ್ನು ಪಡೆಯಲು ಮಾಡಿದ ಪ್ರಯತ್ನದಲ್ಲಿ ಮರಣೋನ್ಮುಖರಾಗುವುದರಲ್ಲಿ ಒಂದು ಆನಂದವಿದೆ. ಇಂತಹ ಧೀರನ ಗಾಯತ್ರಿ ಉಪನಿಷತ್ತಿನ ಬೋಧನೆಯ ಪಲ್ಲವಿ.

ಬ.೦.25/31-10,000, 20-5-88

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯಿ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ.ಪಿ.
ಕೃಷ್ಣಕುಮಾರ್